
**ಕರ್ನಾಟಕ ಸರ್ಕಾರ**

# ರೇಷ್ಮೆ ಇಲಾಖೆ



# ವಾರ್ಷಿಕ ವರದಿ

# 2022-23

**(ಮಾರ್ಚ್ 2023ರ ಅಂತ್ಯಕ್ಕೆ - ಕನ್ನಡ ಮತ್ತು ಆಂಗ್ಲ ಭಾಷೆ)**

ಕರ್ನಾಟಕ ಸರ್ಕಾರ

## ರೇಷ್ಮೆ ಇಲಾಖೆ

# ವಾರ್ಷಿಕ ವರದಿ

# 2022-23

[ಮಾರ್ಚ್-2023 ರ ಅಂತ್ಯಕ್ಕೆ]

## ರೇಷ್ಮೆ ನಿರ್ದೇಶನಾಲಯ, ಬೆಂಗಳೂರು

# ರೇಷ್ಮೆ ಇಲಾಖೆಯ ವಾರ್ಷಿಕ ವರದಿ

## (2022-23 ಮಾರ್ಚ್-2023 ರ ಅಂತ್ಯಕ್ಕೆ)

## 1.0 ಪೀಠಿಕೆ :

ರೇಷ್ಮೆ ಕೃಷಿಯು ರಾಜ್ಯದಲ್ಲಿ 250 ವರ್ಷಗಳ ಹಿಂದಿನಿಂದಲೂ ಒಂದು ಪರಂಪರಾಗತ ಕೃಷಿ ಉದ್ಯಮವು ಕೃಷಿ ಮೂಲದ, ಕಾರ್ಮಿಕ ಪ್ರಧಾನ, ರಫ್ತು ಆಧಾರಿತ ವಾಣಿಜ್ಯ ಚಟುವಟಿಕೆಯಾಗಿದ್ದು, ಕರ್ನಾಟಕ ರಾಜ್ಯದಲ್ಲಿ ಪ್ರಮುಖ ಗುಡಿ ಕೈಗಾರಿಕೆಯಾಗಿದೆ. ಈ ಕೈಗಾರಿಕೆಯು ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳ ಜನರ ಬಡತನವನ್ನು ನಿರ್ಮೂಲಗೊಳಿಸಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಹೊಂದಲು ಸಹಕರಿಸುವಲ್ಲಿ ಯಶಸ್ವಿಯಾಗಿದೆ. ಉಪಕಸುಬಾಗಿದ್ದ ರೇಷ್ಮೆ ಕೃಷಿಯು ಇತ್ತೀಚೆಗೆ ಮುಖ್ಯ ಕಸುಬಾಗಿ ಪರಿಣಮಿಸುತ್ತಿದೆಯಲ್ಲದೆ, ರೇಷ್ಮೆ ವ್ಯವಸಾಯವನ್ನು ದೊಡ್ಡ ಪ್ರಮಾಣದಲ್ಲಿಯೂ ಕೈಗೊಳ್ಳಲು ರೈತರು ಮುಂದೆ ಬರುತ್ತಿದ್ದಾರೆ.

1.2 2022-23ನೇ ಸಾಲಿನ ಮಾರ್ಚ್-2023 ರ ಅಂತ್ಯಕ್ಕೆ ಭಾರತದಲ್ಲಿ ಅಂದಾಜು 27.630 ಮೆ.ಟನ್. ಹಿಪ್ಪುನೇರಳೆ ಕಚ್ಚಾ ರೇಷ್ಮೆ ಉತ್ಪಾದನೆಯಾಗಿದೆ. ಅದರ ಪೈಕಿ ಕರ್ನಾಟಕ ರಾಜ್ಯದಲ್ಲಿ 11823 ಮೆ.ಟನ್ ಹಿಪ್ಪುನೇರಳೆ ಕಚ್ಚಾ ರೇಷ್ಮೆ ಉತ್ಪಾದನೆಯಾಗಿದ್ದು, ದೇಶದ ಹಿಪ್ಪುನೇರಳೆ ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ಕರ್ನಾಟಕ ರಾಜ್ಯವು ಪ್ರಥಮ ಸ್ಥಾನದಲ್ಲಿದ್ದು, ಶೇ.43 ರಷ್ಟು ಕೊಡುಗೆ ನೀಡಿ ಅಗ್ರಸ್ಥಾನವನ್ನುಉಳಿಸಿಕೊಂಡಿದೆ.

## 2.0 ಇಲಾಖೆಯ ಧ್ಯೇಯ ಹಾಗೂ ಉದ್ದೇಶಗಳು

ರೇಷ್ಮೆಇಲಾಖೆಯು ರಾಜ್ಯದಲ್ಲಿ ರೇಷ್ಮೆ ಚಟುವಟಿಕೆಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ. ಇಲಾಖೆಯು ಕೆಳಕಂಡ ಮುಖ್ಯ ಸೇವೆಗಳನ್ನು ಒದಗಿಸುತ್ತಿದೆ.

2.1 ರೇಷ್ಮೆ ಕೃಷಿ ಚಟುವಟಿಕೆಗಳಾದ ಹಿಪ್ಪುನೇರಳೆ ವ್ಯವಸಾಯ, ರೇಷ್ಮೆ ಹುಳು ಸಾಕಾಣಿಕೆ, ನೂಲು ಬಿಚ್ಚಾಣಿಕೆ ಇತ್ಯಾದಿಗಳ ಬಗ್ಗೆ ತಾಂತ್ರಿಕ ಮಾರ್ಗದರ್ಶನ ಮತ್ತು ತರಬೇತಿ ಒದಗಿಸುವುದು.

2.2 ಅಧಿಕ ಇಳುವರಿ ನೀಡುವ ಹಿಪ್ಪುನೇರಳೆ ಮತ್ತು ರೇಷ್ಮೆ ಹುಳುವಿನ ತಳಿಗಳನ್ನು ಸಂಶೋಧನಾ ಕೇಂದ್ರಗಳ ಮೂಲಕ ಅಭಿವೃದ್ಧಿಪಡಿಸಿ ರೇಷ್ಮೆ ಕೃಷಿಕರಿಗೆ ಒದಗಿಸುವುದು.

2.3 ಹಿಪ್ಪುನೇರಳೆ ಹಾಗೂ ರೇಷ್ಮೆ ಹುಳುವಿನ ಮೂಲಬಿತ್ತನೆ ನಿರ್ವಹಿಸುವುದು ಮತ್ತು ರೋಗ ರಹಿತ ರೇಷ್ಮೆ ಮೊಟ್ಟೆಗಳನ್ನು ರೈತರಿಗೆ ಒದಗಿಸಲು ವ್ಯವಸ್ಥೆಗಳನ್ನು ರೂಪಿಸುವುದು.

2.4 ವಿಸ್ತರಣೆ, ಚಾಕಿಸಾಕಾಣಿಕೆ ಮತ್ತು ರೋಗ ನಿಯಂತ್ರಣ ಸೌಲಭ್ಯಗಳನ್ನು ರೇಷ್ಮೆ ಬೆಳೆಗಾರರಿಗೆ ಒದಗಿಸುವುದು.

2.5 ರೇಷ್ಮೆ ಚಟುವಟಿಕೆಗಳಿಗಾಗಿ ಬ್ಯಾಂಕುಗಳಿಂದ ಸಾಲ ಸೌಲಭ್ಯ ಪಡೆಯಲು ರೈತರಿಗೆ / ನೂಲುಬಿಚ್ಚಾಣಿಕೆದಾರರಿಗೆ ಸಹಾಯ ಮಾಡುವುದು.

2.6 ರೇಷ್ಮೆಗೂಡು ಮತ್ತು ರೇಷ್ಮೆ ನೂಲಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು.

2.7 ರೇಷ್ಮೆ ಬೆಳೆಗಾರರು ಮತ್ತು ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಉತ್ಪಾದನಾ ವೆಚ್ಚ ಕಡಿಮೆ ಮಾಡಲು ಹೊಸ ತಾಂತ್ರಿಕತೆಗಳನ್ನು ಅಳವಡಿಸಿ ಉತ್ಪಾದನೆ, ಉತ್ಪಾದಕತೆ ಹೆಚ್ಚಿಸಿ ಗುಣಮಟ್ಟದ ರೇಷ್ಮೆಗೂಡು ಹಾಗೂ ಶ್ರೇಣೀಕೃತ ಕಚ್ಚಾರೇಷ್ಮೆ ಉತ್ಪಾದಿಸಲು ಪ್ರೇರೇಪಿಸುವುದು.

2.8 ರಾಜ್ಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಬಲಪಡಿಸುವುದು.

2.9 ಅಂತರಾಷ್ಟ್ರೀಯ ಗುಣಮಟ್ಟದ ರೇಷ್ಮೆ ಉತ್ಪಾದಿಸಲು ಸ್ವಯಂಚಾಲಿತ ನೂಲು ಬಿಚ್ಚಾಣಿಕೆ ಘಟಕಗಳ ಸ್ಥಾಪನೆಗೆ ಸಹಾಯ ನೀಡುವುದು.

2.10 ಇಲಾಖೆಯ 06 ವಿವಿಧ ಸೇವೆಗಳನ್ನು "ಸಕಾಲ"ದ ಅಡಿಯಲ್ಲಿ ಈ ಕೆಳಕಂಡ ಸೇವೆಗಳನ್ನು ಗುರುತಿಸಲಾಗಿದೆ.

2022ನೇ ಸಾಲಿನಲ್ಲಿ 10312 ಅರ್ಜಿಗಳನ್ನು ಸ್ವೀಕರಿಸಿದ್ದು, 10354 ಅರ್ಜಿಗಳನ್ನು ವಿಲೇಮಾಡಲಾಗಿದೆ.

1. ರೇಷ್ಮೆ ಬೆಳೆಗಾರರಿಗೆ ಪಾಸ್ ಬುಕ್ ನೀಡುವುದು.
2. ರೇಷ್ಮೆ ಕೃಷಿಕರಿಗೆ/ನೂಲುಬಿಚ್ಚಾಣಿಕೆದಾರರಿಗೆ ಸಹಾಯಧನ.
3. ರೇಷ್ಮೆ ಕೃಷಿಗೆ ಸಂಬಂಧಿಸಿದ ತಾಂತ್ರಿಕ ಮಾಹಿತಿ.
4. ಹಿಪ್ಪುನೇರಳೆ ಬೇಸಾಯ ಹಾಗೂ ರೇಷ್ಮೆ ಹುಳು ಸಾಕಾಣಿಕೆಗೆ ಸಂಬಂಧಿಸಿದ ತಾಂತ್ರಿಕ ಮಾಹಿತಿ ನೀಡುವುದು.
5. ಗೂಡಿನ ನಂತರದ ಚಟುವಟಿಕೆಗಳಿಗೆ ಸಂಬಂಧಿಸಿದ ತಾಂತ್ರಿಕ ಮಾಹಿತಿ ನೀಡುವುದು.
6. ರೇಷ್ಮೆನೂಲು ಬಿಚ್ಚಾಣಿಕೆದಾರರಿಗೆ ಲೈಸನ್ಸ್ ನೀಡುವುದು.

2.11 ಇಲಾಖೆಯಲ್ಲಿ ಸೇವಾ ಸಿಂಧು ವ್ಯಾಪ್ತಿಯಲ್ಲಿ 11 ಸೇವೆಗಳನ್ನು ಗುರುತಿಸಲಾಗಿದೆ. ವಿವರಗಳು ಈ ಕೆಳಕಂಡಂತಿವೆ.

1. ರೇಷ್ಮೆ ಬೆಳೆಗಾರರಿಗೆ ಪಾಸ್ ಬುಕ್ ನೀಡುವುದು.
2. ಹೊಸ ಹಿಪ್ಪುನೇರಳೆ ನಾಟಿಗೆ ರೇಷ್ಮೆ ಕೃಷಿಕರಿಗೆ ಸಹಾಯಧನ
3. ಹನಿ ನೀರಾವರಿಗೆ ರೇಷ್ಮೆ ಕೃಷಿಕರಿಗೆ ಸಹಾಯಧನ
4. ಹುಳುಸಾಕಾಣಿಕೆ ಸಲಕರಣೆಗಳಿಗೆ ರೇಷ್ಮೆ ಕೃಷಿಕರಿಗೆ ಸಹಾಯಧನ
5. ರೇಷ್ಮೆನೂಲು ಬಿಚ್ಚಾಣಿಕೆದಾರರಿಗೆ ಸಹಾಯಧನ ಜನರೇಟರ್ ಸ್ಥಾಪನೆಗೆ
6. ರೇಷ್ಮೆನೂಲು ಬಿಚ್ಚಾಣಿಕೆದಾರರಿಗೆ ಸಹಾಯಧನ ಹೀಟ್ ರಿಕವರಿ ಯೂನಿಟ್ ಅಳವಡಿಸುವುದು.
7. ರೇಷ್ಮೆನೂಲು ಬಿಚ್ಚಾಣಿಕೆದಾರರಿಗೆ ಸಹಾಯಧನ ರೀಲಿಂಗ್ ಉಪಕರಣಗಳಿಗೆ
8. ರೇಷ್ಮೆ ಕೃಷಿಗೆ ಸಂಬಂಧಿಸಿದ ತಾಂತ್ರಿಕ ಮಾಹಿತಿ.
9. ಹಿಪ್ಪುನೇರಳೆ ಬೇಸಾಯ ಹಾಗೂ ರೇಷ್ಮೆ ಹುಳು ಸಾಕಾಣಿಕೆಗೆ ಸಂಬಂಧಿಸಿದ ತಾಂತ್ರಿಕ ಮಾಹಿತಿ ನೀಡುವುದು.
10. ಗೂಡಿನ ನಂತರದ ಚಟುವಟಿಕೆಗಳಿಗೆ ಸಂಬಂಧಿಸಿದ ತಾಂತ್ರಿಕ ಮಾಹಿತಿ ನೀಡುವುದು.
11. ರೇಷ್ಮೆ ನೂಲು ಬಿಚ್ಚಾಣಿಕೆದಾರರಿಗೆ ಲೈಸನ್ಸ್ ನೀಡುವುದು.

3.0 ಅನುದಾನ ಮತ್ತು ವೆಚ್ಚ :

2022-23ನೇ ಸಾಲಿನ ರಾಜ್ಯವಲಯ ಹಾಗೂ ಜಿಲ್ಲಾ ವಲಯ ಯೋಜನೆಯ ಅನುದಾನ ಮತ್ತು ವೆಚ್ಚದ ವಿವರಗಳು ಕೆಳಕಂಡಂತಿವೆ:

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ವರ್ಷ | ನಿಗದಿಪಡಿಸಿದ ಆಯವ್ಯಯ | ಪರಿಷ್ಕೃತ ಆಯವ್ಯಯ | ಬಿಡುಗಡೆಯಾದ ಅನುದಾನ | ವೆಚ್ಚ | ಬಿಡುಗಡೆಗೆ ಶೇಕಡ ಸಾಧನೆ |
|---|---|---|---|---|---|---|
| ರಾಜ್ಯವಲಯ | | | | | | |
| 1 | 2022-23 | 28718.200 | 26801.070 | 25207.145 | 23715.382 | 94 |
| 2 | 2021-22 | 28538.670 | 26515.620 | 26470.960 | 25406.314 | 96 |
| ಜಿಲ್ಲಾವಲಯ | | | | | | |
| 1 | 2022-23 | 9857.760 | 10049.900 | 9786.280 | 9204.730 | 94 |

| | | | | | | |
|---|---|---|---|---|---|---|
| 2 | 2021-22 | 9725.800 | 9898.730 | 9875.980 | 9339.040 | 95 |

**4.0** ಭೌತಿಕ ಗುರಿ ಮತ್ತು ಸಾಧನೆ :

ಕಚ್ಚಾ ರೇಷ್ಮೆಯ ಗುರಿ ಮತ್ತು 2022-23ರ ಮಾರ್ಚ್-2023 ಅಂತ್ಯಕ್ಕೆ ಅಂದಾಜು ಉತ್ಪಾದನೆಯ ವಿವರಗಳು ಕೆಳಕಂಡಂತಿವೆ:

(ಮೆ.ಟನ್‌ಗಳಲ್ಲಿ)

| ಕ್ರ. ಸಂ | ವಿವರ | 2022-23ರ ಮಾರ್ಚ್‌ಅಂತ್ಯಕ್ಕೆ | | | 2021-22 ಮಾರ್ಚ್‌ಅಂತ್ಯಕ್ಕೆ | | |
|---|---|---|---|---|---|---|---|
| | | ವಾರ್ಷಿಕ ಗುರಿ | ಅಂದಾಜು ಉತ್ಪಾದನೆ | ಶೇಕಡ ಸಾಧನೆ | ವಾರ್ಷಿಕ ಗುರಿ | ಅಂದಾಜು ಉತ್ಪಾದನೆ | ಶೇಕಡ ಸಾಧನೆ |
| 1 | ಮಿಶ್ರತಳಿ | 9800 | 9144.617 | 93 | 9600 | 8752.775 | 91 |
| 2 | ದ್ವಿತಳಿ | 3200 | 2678.444 | 84 | 3000 | 2438.364 | 81 |
| | ಒಟ್ಟು | 13000 | 11823.060 | 91 | 12600 | 11191.139 | 88 |

5.0 ಹಿಪ್ಪುನೇರಳೆವಿಸ್ತೀರ್ಣ:

ಹಿಪ್ಪುನೇರಳೆ ನಾಟಿಯ ಗುರಿ ಮತ್ತು ಸಾಧನೆಯ ವಿವರಗಳು ಕೆಳಕಂಡಂತಿವೆ: (ಹೆಕ್ಟೇರ್‌ಗಳಲ್ಲಿ)


| ವರ್ಷ | ಹಿಪ್ಪುನೇರಳೆ ನಾಟಿಯ ಗುರಿ | | |
|---|---|---|---|
| | ವಾರ್ಷಿಕ ಗುರಿ | ಸಾಧನೆ | ಶೇ.ಸಾಧನೆ |
| 2022-23 ಮಾರ್ಚ್-23 ರ ಅಂತ್ಯಕ್ಕೆ | 6500 | 7684.64 | 118 |
| 2021-22 ಮಾರ್ಚ್-22ರ ಅಂತ್ಯಕ್ಕೆ | 6500 | 5822.25 | 90 |



ಮಾರ್ಚ್-2023ರ ಅಂತ್ಯಕ್ಕೆ 7684.64 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ನಾಟಿಯಾಗಿದ್ದು, 3076.93 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಕಡ್ಡಿ ಕಿತ್ತು ಹಾಕಲಾಗಿರುತ್ತದೆ. ಒಟ್ಟು 112658.19 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ವಿಸ್ತೀರ್ಣವಿರುತ್ತದೆ.

6.0 ಬಿತ್ತನೆ ಪ್ರದೇಶಗಳು :

6.1 ಮೈಸೂರು ಬಿತ್ತನೆ ವಲಯ:



ಮೈಸೂರು ಬಿತ್ತನೆ ವಲಯವು ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕು, ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕು ಮತ್ತು ತುಮಕೂರು ತಾಲ್ಲೂಕಿನ ಹೆಬ್ಬೂರು ಹೋಬಳಿಯನ್ನು ಒಳಗೊಂಡಿರುತ್ತದೆ. 2022-23ನೇ ಸಾಲಿನ ಮಾರ್ಚ್-2023 ಅಂತ್ಯಕ್ಕೆ ಪ್ರಗತಿಯ ವಿವರಗಳು ಕೆಳಕಂಡಂತಿವೆ:

| ಕ್ರ. ಸಂ | ವಿವರ | ಘಟಕ | 2022-23 | 2021-22 |
|---|---|---|---|---|
| 1 | ಹಿಪ್ಪುನೇರಳೆ ವಿಸ್ತೀರ್ಣ | ಹೆಕ್ಟೇರ್ | 1158.18 | 1157.22 |
| 2 | ಹಳ್ಳಿಗಳು | ಸಂಖ್ಯೆ | 474 | 474 |
| 3 | ರೇಷ್ಮೆ ಬೆಳೆಗಾರರು | ಸಂಖ್ಯೆ | 5140 | 5147 |
| 4 | ಚಾಕಿಯಾದ ಮೊಟ್ಟೆಗಳು | ಲಕ್ಷಗಳಲ್ಲಿ | 14.012 | 13.366 |
| 5 | ಹಣ್ಣಾದ ಮೊಟ್ಟೆಗಳು | ಲಕ್ಷಗಳಲ್ಲಿ | 12.598 | 12.815 |
| 6 | ಉತ್ಪಾದನೆಯಾದ ಗೂಡಿನ ಪ್ರಮಾಣ | ಮೆ.ಟನ್ | 554.814 | 539.721 |
| | | ಕೋಟಿ | 44.852 | 44.777 |
| 7 | ಬಿತ್ತನೆಗೆ ವಹಿವಾಟಾದ ಗೂಡಿನ ಪ್ರಮಾಣ | ಮೆ.ಟನ್ | 344.629 | 313.700 |
| | | ಕೋಟಿ | 27.363 | 25.323 |

| | | | | |
|---|---|---|---|---|
| 8 | ನೂಲು ಬಿಚ್ಚಾಣಿಕೆಗೆ ವಹಿವಾಟಾದ ಗೂಡಿನ ಪ್ರಮಾಣ | ಮೆ.ಟನ್ | 210.185 | 226.021 |
| | | ಕೋಟಿ | 17.489 | 19.453 |
| 9 | ಬಿತ್ತನೆಗೆ ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ಮಾರಾಟವಾಗಿ ಬೋನಸ್ ಪಡೆಯಲು ಅರ್ಹವಾದ ಗೂಡಿನ ಪ್ರಮಾಣ | ಮೆ.ಟನ್ | 207.411 | 374.747 |
| 10 | ಪಾವತಿಸಲಾದ ಬೋನಸ್-ರೂ.175/-ಕೆ.ಜಿ.ಗೆ | ರೂ.ಲಕ್ಷ | 462.742 | 550.807 |
| 11 | 100 ಮೊಟ್ಟೆಗಳಿಗೆ ಸರಾಸರಿ ಇಳುವರಿ | ಕೆ.ಜಿ | 44.00 | 42.00 |
| | | ಸಂಖ್ಯೆ | 35602 | 34941 |

ಪಿ1 ಶುದ್ಧ ಮೈಸೂರು ತಳಿ ಮೊಟ್ಟೆ ಚಾಕಿಗೆ ಪ್ರತಿ 100 ಮೊಟ್ಟೆಗೆ ರೂ.750/- ಚಾಕಿ ಪ್ರೋತ್ಸಾಹ ಧನವನ್ನು ನೀಡುವ ಕಾರ್ಯಕ್ರಮದಡಿ 2022-23ನೇ ಸಾಲಿನ ಮಾರ್ಚ್-2023ರ ಅಂತ್ಯಕ್ಕೆ 3,95,640 ಮೊಟ್ಟೆಗಳಿಗೆ ರೂ.29.675 ಲಕ್ಷಗಳ ಚಾಕಿ ಪ್ರೋತ್ಸಾಹಧನವನ್ನು ಪಾವತಿಸಲಾಗಿದೆ.

6.2 ದ್ವಿತಳಿಬಿತ್ತನೆ ವಲಯ :




ರಾಜ್ಯದ 7 ಜಿಲ್ಲೆಗಳ ಪೈಕಿ ಗುರುತಿಸಿರುವ 31 ತಾಲ್ಲೂಕುಗಳಲ್ಲಿ ದ್ವಿತಳಿ ಬಿತ್ತನೆ ಗೂಡನ್ನು ಉತ್ಪಾದನೆ ಮಾಡುತ್ತಿದ್ದು, ಹಾಸನ, ಆನೇಕಲ್, ತುಮಕೂರು ಮತ್ತು ಕೆ.ಆರ್.ಪೇಟೆ ಬಿತ್ತನೆ ಪ್ರದೇಶದಲ್ಲಿ ಹೆಚ್ಚು ಪಾಲು ಬಿತ್ತನೆಗೂಡು ಉತ್ಪಾದನೆಯಾಗುತ್ತಿದೆ. ಈ ಪ್ರದೇಶದಲ್ಲಿ ಹೆಚ್ಚಾಗಿ ಸಿಎಸ್‌ಆರ್ 2 ತಳಿಯ ಮೊಟ್ಟೆಗಳ ಸಾಕಾಣಿಕೆ ಮಾಡಲಾಗುತ್ತಿದೆ. ದ್ವಿತಳಿ ಕಾರ್ಯಕ್ರಮದಡಿ ದ್ವಿತಳಿ ಸಂಕರಣ ಮೊಟ್ಟೆ ಉತ್ಪಾದನೆಗೆ ಬೇಕಾಗುವ ಸಿಎಸ್‌ಆರ್-2, ಸಿಎಸ್‌ಆರ್-4, ಎಫ್‌ಸಿ1 ಮತ್ತು ಎಫ್‌ಸಿ2 ತಳಿಯ ಮೊಟ್ಟೆಗಳ ಸಾಕಾಣಿಕೆ ಸಹ ಮಾಡಲಾಗುತ್ತಿದೆ. 2022-23ನೇ ಸಾಲಿನ ಪ್ರಗತಿಯ ವಿವರಗಳು ಕೆಳಕಂಡಂತಿವೆ:

| ಕ್ರ ಸಂ | ವಿವರ | ಘಟಕ | 2022-23 | 2021-22 |
|---|---|---|---|---|
| 1 | ಹಿಪ್ಪುನೇರಳೆ ವಿಸ್ತೀರ್ಣ | ಹೆಕ್ಟೇರ್ | 4018.35 | 3647.47 |
| 2 | ರೇಷ್ಮೆ ಬೆಳೆಗಾರರು | ಸಂಖ್ಯೆ | 6181 | 5637 |
| 3 | ಚಾಕಿಯಾದ ಶುದ್ಧ ದ್ವಿತಳಿ ಮೊಟ್ಟೆಗಳು (ಬಿತ್ತನೇತರ ಪ್ರದೇಶವು ಒಳಗೊಂಡಂತೆ) | ಲಕ್ಷಗಳಲ್ಲಿ | 7.877 | 6.818 |
| 4 | ಹಣ್ಣಾದ ಮೊಟ್ಟೆಗಳು | ಲಕ್ಷಗಳಲ್ಲಿ | 6.941 | 6.394 |
| 5 | ಉತ್ಪಾದನೆಯಾದ ಗೂಡಿನ ಪ್ರಮಾಣ | ಮೆ.ಟನ್ | 370.20 | 347.11 |
| | | ಕೋಟಿ | 24.06 | 22.56 |
| 6 | ಬಿತ್ತನೆಗೆ ವಹಿವಾಟಾದ ಗೂಡಿನ ಪ್ರಮಾಣ | ಮೆ.ಟನ್ | 245.00 | 213.07 |
| | | ಕೋಟಿ | 15.92 | 13.849 |
| 7 | ನೂಲು ಬಿಚ್ಚಾಣಿಕೆಗೆ ವಹಿವಾಟಾದ ಗೂಡಿನ ಪ್ರಮಾಣ | ಮೆ.ಟನ್ | 125.20 | 134.04 |
| | | ಕೋಟಿ | 8.14 | 8.712 |
| 8 | ಬಿತ್ತನೆಗೆ ಬೇಡಿಕೆಯಿಲ್ಲದೆ ನೂಲು ಬಿಚ್ಚಾಣಿಕೆಗೆ ಮಾರಾಟವಾಗಿ ಬೋನಸ್ ಪಡೆಯಲು ಅರ್ಹವಾದ ಗೂಡಿನ ಪ್ರಮಾಣ | ಮೆ.ಟನ್ | 109.665 | 143.962 |
| 9 | ಪಾವತಿಸಲಾದ ಬೋನಸ್- ರೂ.175/- ಕೆ.ಜಿ.ಗೆ | ರೂ.ಲಕ್ಷ | 241.20 | 251.99 |
| 10 | 100 ಮೊಟ್ಟೆಗಳಿಗೆ ಸರಾಸರಿ ಇಳುವರಿ | ಕೆ.ಜಿ | 53.00 | 54.00 |
| | | ಸಂಖ್ಯೆ | 34668 | 35284 |

ನಿರಂತರ ಬಿತ್ತನೆ ಗೂಡಿನ ಸರಬರಾಜಿಗಾಗಿ ಬಿತ್ತನೆ ಬೆಳೆಗಾರರನ್ನು ಪ್ರೋತ್ಸಾಹಿಸಲು ಉತ್ಪಾದನೆ ಹಾಗೂ ಗುಣ ಮಟ್ಟದ ಆಧಾರದ ಮೇಲೆ ಬಿತ್ತನೆ ಗೂಡಿಗೆ ಪ್ರೋತ್ಸಾಹ ಧನವನ್ನು ಪ್ರತಿ ಕೆ.ಜಿಗೆ ರೂ.70 / 120 ರಂತೆ ಮೈಸೂರು ತಳಿ ಹಾಗೂ ದ್ವಿತಳಿ ಗೂಡಿಗೆ 2022-23ನೇ ಸಾಲಿನಲ್ಲಿ ಮಾರ್ಚ್-2023 ರ ಅಂತ್ಯಕ್ಕೆ ರೂ.926.197 ಲಕ್ಷಗಳ ಪ್ರೋತ್ಸಾಹ ಧನ ಪಾವತಿಸಲಾಗಿದೆ.

7.0 ರೇಷ್ಮೆ ಕೃಷಿಕ್ಷೇತ್ರಗಳು :




89 ರೇಷ್ಮೆ ಕೃಷಿ ಕ್ಷೇತ್ರಗಳ ಪೈಕಿ ವರದಿಯ ಸಾಲಿನಲ್ಲಿ ಇಲಾಖೆಯ 46 ರೇಷ್ಮೆ ಕೃಷಿ ಕ್ಷೇತ್ರಗಳು ಕಾರ್ಯನಿರ್ವಹಿಸುತ್ತಿವೆ. ಈ ಕೃಷಿ ಕ್ಷೇತ್ರಗಳಲ್ಲಿ 2022-23 ನೇ ಸಾಲಿನಲ್ಲಿ 13.249 ಲಕ್ಷ ಮೂಲ ತಳಿಬಿತ್ತನೆ ಗೂಡುಗಳನ್ನು

ಉತ್ಪಾದಿಸಲಾಗಿದೆ. 2021-22 ರ ಅಂತ್ಯಕ್ಕೆ 13.885 ಲಕ್ಷ ಮೂಲ ತಳಿ ಬಿತ್ತನೆಗೂಡುಗಳ ಉತ್ಪಾದನೆಯಾಗಿತ್ತು.

ರೇಷ್ಮೆ ಕೃಷಿ ಕ್ಷೇತ್ರಗಳಲ್ಲಿ ಮೂಲತಳಿ ಬಿತ್ತನೆಗೂಡಿನ ಉತ್ಪಾದನೆಯಲ್ಲದೆ, ಕೆಳಕಂಡ ಚಟುವಟಿಕೆಗಳನ್ನು ನಿರ್ವಹಿಸಲಾಗಿದೆ.

1. ನೀರಾವರಿ ಸೌಲಭ್ಯ ಇರುವ ರೇಷ್ಮೆ ಕೃಷಿ ಕ್ಷೇತ್ರಗಳಲ್ಲಿ ಸುಧಾರಿತ ಹಿಪ್ಪುನೇರಳೆ ತಳಿಗಳ ಸಸಿಗಳನ್ನು ಬೆಳೆಸಿ ರೈತರಿಗೆ ವಿತರಿಸುವುದು,
2. ದ್ವಿತಳಿ ರೇಷ್ಮೆ ಮೊಟ್ಟೆಗಳನ್ನು ಚಾಕಿ ಸಾಕಾಣೆ ಮಾಡಿ, ರೇಷ್ಮೆ ಬೆಳೆಗಾರರಿಗೆ ವಿತರಿಸುವುದು,
3. ಸಂಶೋಧನಾ ಸಂಸ್ಥೆಗಳು ಅಭಿವೃದ್ಧಿಪಡಿಸಿದ ಹೊಸತಳಿಗಳು ಮತ್ತು ತಾಂತ್ರಿಕತೆಗಳನ್ನು ಕ್ಷೇತ್ರಮಟ್ಟದ ಪರೀಕ್ಷೆಗಳಿಗೆ ಒಳಪಡಿಸುವುದು,
4. ಮಹಿಳಾ ಪ್ರಾತ್ಯಕ್ಷತಾ ಕ್ಷೇತ್ರಗಳಲ್ಲಿ ಮಹಿಳಾ ರೇಷ್ಮೆಬೆಳೆಗಾರರಿಗೆ ಪ್ರಾತ್ಯಕ್ಷತಾ ತರಬೇತಿ ನೀಡುವುದು,

8.0 ರೇಷ್ಮೆ ಮೊಟ್ಟೆ ಉತ್ಪಾದನೆ:



ರಾಜ್ಯದಲ್ಲಿ 34 ಸರ್ಕಾರಿ ಬಿತ್ತನೆಕೋಠಿಗಳು ಕಾರ್ಯನಿರ್ವಹಿಸುತ್ತಿದ್ದು 6 ಕೇಂದ್ರ ರೇಷ್ಮೆ ಮಂಡಳಿಯ ಬಿತ್ತನೆ ಕೋಠಿಗಳು ಹಾಗೂ 142 ಖಾಸಗಿ ನೋಂದಾಯಿತ ರೇಷ್ಮೆ ಬಿತ್ತನೆ ಕೋಠಿಗಳ ಸಹಯೋಗದೊಂದಿಗೆ ರೇಷ್ಮೆ ಮೊಟ್ಟೆಗಳನ್ನು ಉತ್ಪಾದಿಸಿ ರೇಷ್ಮೆ ಬೆಳೆಗಾರರಿಗೆ ವಿತರಿಸುವ ಕಾರ್ಯದಲ್ಲಿ ನಿರತವಾಗಿವೆ. 34 ಸರ್ಕಾರಿ ಬಿತ್ತನೆಕೋಠಿಗಳ ಪೈಕಿ, ಮೈಸೂರು ಬಿತ್ತನೆ ವಲಯದ 15 ಬಿತ್ತನೆ ಕೋಠಿಗಳಲ್ಲಿ ಶುದ್ಧ ಮೈಸೂರು ತಳಿ ರೇಷ್ಮೆ ಮೊಟ್ಟೆಗಳನ್ನು ಹಾಗೂ ದ್ವಿತಳಿ ಬಿತ್ತನೆ ವಲಯದ 3 ಬಿತ್ತನೆ ಕೋಠಿಗಳಲ್ಲಿ ಶುದ್ಧ ದ್ವಿತಳಿ ರೇಷ್ಮೆ ಮೊಟ್ಟೆಗಳನ್ನು ಉತ್ಪಾದಿಸಿ ವಿತರಿಸಲಾಗುತ್ತಿದೆ. ಉಳಿದ ಬಿತ್ತನೆಕೋಠಿಗಳು ವಾಣಿಜ್ಯ ಪ್ರದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿವೆ.

ಈ ಎಲ್ಲಾ ಬಿತ್ತನೆ ಕೋಠಿಗಳಲ್ಲಿ ಹಾಗೂ ನೋಂದಾಯಿತ ಖಾಸಗಿ ಮೊಟ್ಟೆ ತಯಾರಕರು ಸೇರಿದಂತೆ 2022-23ನೇ ಸಾಲಿನಲ್ಲಿ ಮಾರ್ಚ್-2023ರ ಅಂತ್ಯಕ್ಕೆ ಒಟ್ಟು 1194.823 ಲಕ್ಷ ಮೊಟ್ಟೆ ಉತ್ಪಾದನೆಯಾಗಿದೆ. 2021-22 ರ ಅಂತ್ಯಕ್ಕೆ 1082.557 ಲಕ್ಷ ರೇಷ್ಮೆ ಮೊಟ್ಟೆ ಉತ್ಪಾದನೆಯಾಗಿತ್ತು.


9.0 ರೇಷ್ಮೆಗೂಡಿನ ಉತ್ಪಾದನೆ:

9.1 ರೇಷ್ಮೆ ಗೂಡಿನ ಅಂದಾಜು ಉತ್ಪಾದನೆಯ ವಿವರ ಕೆಳಕಂಡಂತಿವೆ. (ಮೆ.ಟನ್)

| ಕ್ರ. ಸಂ | ವಿವರ | 2022-23 | | | 2021-22ರ ಅಂತ್ಯಕ್ಕೆ | | |
|---|---|---|---|---|---|---|---|
| | | ವಾರ್ಷಿಕ ಗುರಿ | ಮಾರ್ಚ್-2022ರ ಅಂತ್ಯಕ್ಕೆ | | ವಾರ್ಷಿಕ ಗುರಿ | ಅಂದಾಜು ಉತ್ಪಾದನೆ | ಶೇಕಡ ಸಾಧನೆ |
| | | | ಅಂದಾಜು ಉತ್ಪಾದನೆ | ಶೇಕಡ ಸಾಧನೆ | | | |
| 1 | ಮಿಶ್ರತಳಿ | 70560.000 | 65689.902 | 93 | 69840 | 62857.246 | 90 |
| 2 | ದ್ವಿತಳಿ | 20800.000 | 17654.875 | 85 | 20150 | 16064.549 | 80 |
| 3 | ಮೈಸೂರುತಳಿ | | 554.814 | | 705 | 539.721 | 77 |
| | ಒಟ್ಟು | 91360.00 | 83899.591 | 92 | 90695 | 79461.516 | 88 |



9.2 2022-23ನೇ ಸಾಲಿನ ಮಾರ್ಚ್-2023ರ ಅಂತ್ಯಕ್ಕೆ ಪ್ರತಿ ಕೆ.ಜಿ ಸರಾಸರಿ ರೇಷ್ಮೆ ಗೂಡಿನ ಧಾರಣೆ ರೂ.571/-ಆಗಿದ್ದು, 2021-22ರ ಅಂತ್ಯಕ್ಕೆ ರೇಷ್ಮೆ ಗೂಡಿನ ಧಾರಣೆ ರೂ.401/- ಹೋಲಿಸಿದಾಗ ರೂ.170/- ರಷ್ಟು ಹೆಚ್ಚಾಗಿರುತ್ತದೆ.



9.3. ರೇಷ್ಮೆ ಗೂಡಿನ ವಹಿವಾಟಿನಲ್ಲಿ ಪಾರದರ್ಶಕತೆ ಹಾಗೂ ಗೂಡುಗಳಿಗೆ ಸ್ಪರ್ಧಾತ್ಮಕ ದರ ನಿಗದಿಗಾಗಿ ಇ-ಹರಾಜು ಪದ್ಧತಿಯನ್ನು ಕೊಳ್ಳೇಗಾಲ, ರಾಮನಗರ, ಶಿಡ್ಲಘಟ್ಟ, ಕೋಲಾರ, ಕನಕಪುರ, ಚನ್ನಪಟ್ಟಣ, ವಿಜಯಪುರ, ಮಳವಳ್ಳಿ, ಹೆಚ್.ಕ್ರಾಸ್, ಶ್ರೀನಿವಾಸಪುರ


ಕ್ಯಾಲನೂರು ಮತ್ತು ಚಿಂತಾಮಣಿ ಮಾರುಕಟ್ಟೆಗಳಲ್ಲಿ ಅಳವಡಿಸಲಾಗಿದೆ. ಪ್ರಸ್ತುತ ಶೇ.95ಕ್ಕಿಂತಲೂ ಹೆಚ್ಚಿನ ರೇಷ್ಮೆಗೂಡು ಇ-ಹರಾಜು ಮೂಲಕ ವಿಲೇವಾರಿಯಾಗುತ್ತಿದೆ.

9.4. ರಾಮನಗರ, ಕೊಳ್ಳೇಗಾಲ, ಶಿಡ್ಲಘಟ್ಟ, ಕೋಲಾರ, ಕನಕಪುರ, ಚನ್ನಪಟ್ಟಣ ಮತ್ತು ಚಿಂತಾಮಣಿ ಮಾರುಕಟ್ಟೆಗಳಲ್ಲಿ ರೇಷ್ಮೆಗೂಡು ಪರೀಕ್ಷಾ ಪ್ರಯೋಗಾಲಯ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ಕನಕಪುರ ಕೊಳ್ಳೆಗಾಲ ಮತ್ತು ಚನ್ನಪಟ್ಟಣ ಮಾರುಕಟ್ಟೆಗಳಲ್ಲಿ ರೇಷ್ಮೆಗೂಡು ಶ್ರೇಣೀಕರಣವನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದೆ.

9.5. ರಾಮನಗರ, ಕೋಲಾರ, ಶಿಡ್ಲಘಟ್ಟ, ಕನಕಪುರ, ಚಿಂತಾಮಣಿ, ವಿಜಯಪುರ, ಚನ್ನಪಟ್ಟಣ, ಕೊಳ್ಳೆಗಾಲ, ಚಿಕ್ಕಬಳ್ಳಾಪುರ, ಸಂತೇಮರಹಳ್ಳಿ, ಮಳವಳ್ಳಿ ಮತ್ತು ಮೈಸೂರು ರೇಷ್ಮೆಗೂಡಿನ ಮಾರುಕಟ್ಟೆಗಳಲ್ಲಿ ಇ-ಹಣಪಾವತಿಯನ್ನು ಪ್ರಾರಂಭಿಸಲಾಗಿದ್ದು, ಮೇಲಿನ ಮಾರುಕಟ್ಟೆಗಳಲ್ಲಿ ಶೇ.100 ರಷ್ಟು ಇ-ಹಣ ಪಾವತಿಮಾಡಲಾಗುತ್ತಿದೆ. ಉಳಿದ ಮಾರುಕಟ್ಟೆಗಳಲ್ಲಿ ಇ-ಹಣಪಾವತಿಗೆ ಕ್ರಮವಹಿಸಲಾಗುತ್ತಿದೆ.

ಈ ಪದ್ಧತಿಯಲ್ಲಿ ರೇಷ್ಮೆಗೂಡಿನ ಮೌಲ್ಯವನ್ನು ರೇಷ್ಮೆ ಬೆಳೆಗಾರರ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾವಣೆ ಮಾಡಲಾಗುತ್ತಿದೆ.

10.0 ಕಚ್ಚಾ ರೇಷ್ಮೆ ಉತ್ಪಾದನೆ :



10.1 2022-23ನೇ ಸಾಲಿಗೆ ರಾಜ್ಯದಲ್ಲಿ 13,000 ಮೆ.ಟನ್ ರೇಷ್ಮೆ ಉತ್ಪಾದನಾ ಗುರಿ ನಿಗದಿಪಡಿಸಲಾಗಿದ್ದು, ಇದರಲ್ಲಿ 3,200 ಮೆ.ಟನ್ ದ್ವಿತಳಿ ರೇಷ್ಮೆ ಒಳಗೊಂಡಿದೆ. ಮಾರ್ಚ್-2023ರ ಅಂತ್ಯಕ್ಕೆ ಅಂದಾಜು 11823.06 ಮೆ.ಟನ್ ಕಚ್ಚಾ ರೇಷ್ಮೆ ಉತ್ಪಾದಿಸಲಾಗಿದ್ದು, ಇದರಲ್ಲಿ 2678.444 ಮೆ.ಟನ್ ದ್ವಿತಳಿರೇಷ್ಮೆಯಾಗಿದೆ.

10.2 ಪ್ರತಿಕೆ.ಜಿ. ಕಚ್ಚಾ ರೇಷ್ಮೆಯ ಸರಾಸರಿ ದರಗಳ ವಿವರಗಳು ಕೆಳಕಂಡಂತಿದೆ. (ರೂ.ಗಳಲ್ಲಿ)

| ಕ್ರ. ಸಂ | ವಿವರ | 2022-23 | 2021-22 |
|---|---|---|---|
| 1 | ಮಲ್ಟಿಎಂಡ್ | 4434 | 2610 |
| 2 | ಸ್ವಯಂಚಾಲಿತ ರೀಲಿಂಗ್ (ಎ.ಆರ್.ಎಂ) | 3257 | 2351 |
| 3 | ಫಿಲೇಚರ್ | 4372 | 2438 |
| 4 | ಚರಕ | 3433 | 1877 |
| 5 | ಡೂಪಿಯಾನ್ | 2674 | 1688 |



11.0 ಸರ್ಕಾರಿ ರೇಷ್ಮೆ ಕಾರ್ಖಾನೆಗಳು

ರಾಜ್ಯದ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ, ಮಾಂಬಳ್ಳಿ, ಸಂತೇಮರಹಳ್ಳಿ, ಚಾಮರಾಜನಗರ ಮತ್ತು ದಾವಣಗೆರೆ ಜಿಲ್ಲೆಯ ತೋಳಹುಣಸೆಯಲ್ಲಿ ಸರ್ಕಾರಿ ರೇಷ್ಮೆ ಕಾರ್ಖಾನೆಗಳನ್ನುಸ್ಥಾಪಿಸಲಾಗಿದೆ. ತೋಳಹುಣಸೆ ರೇಷ್ಮೆ ಕಾರ್ಖಾನೆಯು ಅರೆ ಸ್ವಯಂಚಾಲಿತ ಕಿರುಘಟಕವಾಗಿದ್ದು ವಿಶ್ವಬ್ಯಾಂಕ್ ನೆರವಿನ ಕಾರ್ಯಕ್ರಮದಡಿ ಸ್ಥಾಪಿಸಲಾಗಿದೆ. 2015-16 ರಿಂದ 2022-23ನೇ ಸಾಲಿನ ಮಾರ್ಚ್-2023 ಅಂತ್ಯದವರೆಗೂ ಈ ಕಾರ್ಖಾನೆಗಳಲ್ಲಿ ಕಾರ್ಯಸ್ಥಗಿತವಾಗಿರುತ್ತದೆ.

12.0 ಸಹಕಾರ ಸಂಘಗಳು :

ರಾಜ್ಯದಲ್ಲಿರುವ ಒಟ್ಟು 94 ರೇಷ್ಮೆ ಸಹಕಾರ ಸಂಘಗಳ ಪೈಕಿ, 44 ರೇಷ್ಮೆ ಬೆಳೆಗಾರರ ಹಾಗೂ ರೈತ ಸೇವಾ ಸಹಕಾರ ಸಂಘಗಳಾಗಿ ಮಾರ್ಪಾಟು ಹೊಂದಿದ್ದು, ಸಹಕಾರ ಇಲಾಖೆಯಲ್ಲಿ ಆಯಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ಮೂಲಕ ಶೂನ್ಯ ಬಡ್ಡಿ ದರದಲ್ಲಿ ರೇಷ್ಮೆ ಬೆಳೆಗಾರರಿಗೆ ಬೆಳೆ ಸಾಲ ನೀಡುವುದು ಇವುಗಳ ಮುಖ್ಯ ಉದ್ದೇಶವಾಗಿರುತ್ತದೆ. ಇಂತಹ ಸಹಕಾರ ಸಂಘಗಳು ರೇಷ್ಮೆ ಇಲಾಖೆಯಿಂದ ಯಾವುದೇ ಅನುದಾನವನ್ನಾಗಲಿ ಅಥವಾ ಸಹಾಯಧನವನ್ನಾಗಲಿ ಪಡೆದಿರುವುದಿಲ್ಲ. ಇನ್ನು ಬಾಕಿ ಉಳಿದ 50 ಸಹಕಾರ ಸಂಘಗಳ ಪೈಕಿ, 20 ಇತರೆ ರೇಷ್ಮೆ ಸಹಕಾರ

ಸಂಘಗಳಾಗಿದ್ದು, ಈ ಸಂಘಗಳು ರೇಷ್ಮೆ ಮತ್ತು ರೇಷ್ಮೆ ಉಪಉತ್ಪನ್ನಗಳ ಮಾರಾಟದಲ್ಲಿ ತೊಡಗಿರುವುದರಿಂದ ರೇಷ್ಮೆ ನೂಲು ಬಿಚ್ಚಾಣಿಕೆದಾರರ ಹಾಗೂ ಕೈಗಾರಿಕಾ ಸಹಕಾರ ಸಂಘಗಳ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ. ಇನ್ನುಳಿದ 30 ರೇಷ್ಮೆ ನೂಲು ಬಿಚ್ಚುವವರ/ಬಿಚ್ಚಾಣಿಕೆದಾರರ ಸಹಕಾರ ಸಂಘಗಳಿದ್ದು, ಇವುಗಳಲ್ಲಿ 20 ಕಾರ್ಯನಿರತ. 03 ಸ್ಥಗಿತ ಹಾಗೂ 07 ಸಹಕಾರ ಸಂಘಗಳು ಸಮಾಪನೆಯಲ್ಲಿರುತ್ತವೆ. ಈ 30 ರೇಷ್ಮೆ ಬಿಚ್ಚಾಣಿಕೆದಾರರ ಸಹಕಾರ ಸಂಘಗಳ ಪೈಕಿ ಕರ್ನಾಟಕ ರಾಜ್ಯ ರೇಷ್ಮೆ ಮಾರಾಟ ಸಹಕಾರ ಮಹಾಮಂಡಳನಿ., ಬೆಂಗಳೂರು ಸಹ ಒಳಗೊಂಡಿರುತ್ತದೆ.

13.0 ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ :



ಈ ಯೋಜನೆಯಡಿ, ಉದ್ಯೋಗ ಒದಗಿಸಲು ಮತ್ತು ಆಸ್ತಿ ಸೃಷ್ಟಿಗೆ ಆದ್ಯತೆ ನೀಡಲಾಗುತ್ತಿದ್ದು, ಇದು ಗ್ರಾಮೀಣ ಬದುಕನ್ನು ಆರ್ಥಿಕವಾಗಿ ಉತ್ತಮಗೊಳಿಸಿದೆ. ಗ್ರಾಮೀಣ ಪ್ರದೇಶದಲ್ಲಿ ರೇಷ್ಮೆ ಕೃಷಿಯನ್ನು ಅವಲಂಬಿಸಿರುವ ಬೆಳೆಗಾರರಿಗೆ ಹೆಚ್ಚುವರಿ ಸವಲತ್ತು ಒದಗಿಸುವ ಉದ್ದೇಶದಿಂದ ಹಿಪ್ಪುನೇರಳೆ ತೋಟ ಅಭಿವೃದ್ಧಿಗೆ ಸಂಬಂಧಿಸಿದ ಹಿಪ್ಪುನೇರಳೆ ನರ್ಸರಿ, ತೋಟ ಸ್ಥಾಪನೆ ಹಾಗೂ ನಿರ್ವಹಣೆ, ಮರಕೃಷಿ ಹಾಗೂ ನಿರ್ವಹಣೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಇವುಗಳಿಗಾಗಿ ಸಂಪೂರ್ಣ ಕೂಲಿ ವೆಚ್ಚವನ್ನು ಈ ಯೋಜನೆಯಡಿ ಭರಿಸಲಾಗುತ್ತಿದೆ.

ಇವುಗಳಿಂದ ಹಿಪ್ಪುನೇರಳೆ ವಿಸ್ತೀರ್ಣ ಹೆಚ್ಚಳವಾಗುವುದಲ್ಲದೇ, ಮಣ್ಣಿನ ಫಲವತ್ತತೆ ಸುಧಾರಣೆಯೊಂದಿಗೆ ಮಣ್ಣಿನ ಆರೋಗ್ಯ ಉತ್ತಮವಾಗುವುದರಿಂದ ಗೂಡಿನ ಉತ್ಪಾದನೆ ಅಧಿಕವಾಗಿ ರೇಷ್ಮೆ ಬೆಳೆಗಾರರ ಆರ್ಥಿಕ ಮಟ್ಟ ಸುಧಾರಿಸುತ್ತದೆ.


ಸದರಿ ಯೋಜನೆಯಡಿ, 2022-23ನೇ ಸಾಲಿನ ಮಾರ್ಚ್-2023ರ ಅಂತ್ಯಕ್ಕೆ ರೇಷ್ಮೆ ಇಲಾಖೆಯಲ್ಲಿ 13200 ಕಾಮಗಾರಿಗಳು ಹಾಗೂ ಆರ್ಥಿಕ ಗುರಿ ರೂ.121.38 ಕೋಟಿ (ರೂ.12.39 ಕೋಟಿ ಇಲಾಖೆಯಿಂದ ಒಗ್ಗೂಡಿಸುವಿಕೆ ಅನುದಾನ ಹಾಗೂ ರೂ.108.99 ಕೋಟಿ ಉದ್ಯೋಗ ಖಾತರಿ ಅನುದಾನ) ಗುರಿ ಪ್ರಸ್ತಾಪಿಸಲಾಗಿರುತ್ತದೆ. 13200 ಮಂಜೂರಾದ ಕಾಮಗಾರಿಗಳು ಪೈಕಿ 13621 ಕಾಮಗಾರಿಗಳು ಚಾಲನೆಯಾಗಿದ್ದು, ಇದಕ್ಕಾಗಿ ಒಟ್ಟು ರೂ.69.91 ಕೋಟಿ (ರೂ.6.27 ಇಲಾಖಾ ಅನುದಾನ ಮತ್ತು ರೂ.63.64 ಕೋಟಿ ಉದ್ಯೋಗ ಖಾತರಿ ಅನುದಾನ) ವೆಚ್ಚವಾಗಿರುತ್ತದೆ. ಈ ಪೈಕಿ11028 ಕಾಮಗಾರಿಗಳು ಇಲಾಖಾ ಒಗ್ಗೂಡಿಸುವಿಕೆ ಹಾಗೂ ನರೆಗಾ ಕಾರ್ಯಕ್ರಮದಡಿ ಪೂರ್ಣಗೊಂಡಿದ್ದು, 1788117 ಮಾನವ ದಿನಗಳ ಸೃಜನೆಯಾಗಿರುತ್ತದೆ. ನರೆಗಾ ಯೋಜನೆಯಡಿ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ಪ್ರಗತಿ ಸಾಧಿಸಲಾಗುತ್ತಿದೆ.

| ಕ್ರ ಸಂ | ವಿವರಗಳು | 2022-23 | | 2021-22 | |
|---|---|---|---|---|---|
| | | ಭೌತಿಕ (ಎಕರೆ) | ಆರ್ಥಿಕ (ಲಕ್ಷ) | ಭೌತಿಕ (ಎಕರೆ) | ಆರ್ಥಿಕ (ಲಕ್ಷ) |
| 1 | ಹಿಪ್ಪುನೇರಳೆನರ್ಸರಿ | 160 | 129.78 | 277 | 259.85 |
| 2 | ಹಿಪ್ಪುನೇರಳೆ ನಾಟಿ | 8423 | 4403.72 | 8492 | 4677.22 |
| 3 | ಇಲಾಖಾ ಅನುದಾನ | | 626.63 | | 105.08 |
| 4 | 2 ಮತ್ತು 3 ನೇ ವರ್ಷದ ಹಿಪ್ಪುನೇರಳೆ ತೋಟದ ನಿರ್ವಹಣೆ | 2044 | 1607.30 | 6034 | 5027.48 |
| 5 | ಹಿಪ್ಪುನೇರಳೆ ಮರಗಡ್ಡಿ | 258 | 121.12 | 804 | 535.57 |
| 6 | 2 ಮತ್ತು 3ನೇ ವರ್ಷದ ಹಿಪ್ಪುನೇರಳೆ ಮರಪದ್ಧತಿ ತೋಟದ ನಿರ್ವಹಣೆ | 143 | 102.95 | 479 | 267.40 |

| | | | | | |
|---|---|---|---|---|---|
| | ಒಟ್ಟು | 11028 | 6991.50 | 16086 | 10872.60 |
| | ಸೃಜಿಸಲಾದ ಮಾನವ ದಿನಗಳು | 1788117 | | 3368366 | |

14.0 ರೇಷ್ಮೆಅಭಿವೃದ್ಧಿಯೋಜನೆ:

ಈ ಯೋಜನೆಯಡಿಯಲ್ಲಿ ಪ್ರಮುಖ ಕಾರ್ಯಕ್ರಮಗಳಾದ ಪ್ರತ್ಯೇಕ ಹುಳು ಸಾಕಾಣಿಕೆ ಮನೆ ನಿರ್ಮಾಣ, ಮೌಂಟಿಂಗ್ ಹಾಲ್ ನಿರ್ಮಾಣ, ಸೋಂಕು ನಿವಾರಕಗಳು, ಹಿಪ್ಪುನೇರಳೆ ತೋಟ ನಿರ್ವಹಣೆ ಸಲಕರಣೆ/ ಹುಳು ಸಾಕಾಣಿಕೆ ಸಲಕರಣೆಗಳು, ಚಾಕಿ ಸಾಕಾಣಿಕಾ ಕೇಂದ್ರಗಳ ಸ್ಥಾಪನೆ,



ಗುಣಮಟ್ಟದ ಹಿಪ್ಪುನೇರಳೆ ಸೊಪ್ಪು ಮತ್ತು ರೇಷ್ಮೆಗೂಡಿನ ಉತ್ಪಾದನೆಗೆ ಸಹಕಾರಿಯಾಗಿವೆ. ಗೂಡಿನ ನಂತರದ ಕಾರ್ಯಕ್ರಮಗಳಾದ ಸ್ವಯಂಚಾಲಿತ ರೀಲಿಂಗ್ ಘಟಕಸ್ಥಾಪನೆ, ಮಲ್ಟಿಎಂಡ್ ರೀಲಿಂಗ್ ಘಟಕ ಸ್ಥಾಪನೆ, ಕಾಟೇಜ್ ಬೇಸಿನ್ ಘಟಕಗಳ ಉನ್ನತೀಕರಣ, ಪ್ಯೂಪಾ ಪ್ರೋಸೆಸ್ಸಿಂಗ್ ಘಟಕ ಸ್ಥಾಪನೆಮತ್ತು ರೀಲಿಂಗ್ ಚಟುವಟಿಕೆಗಳಿಗೆ ಅವಶ್ಯಕ ಯಂತ್ರೋಪಕರಣಗಳಿಗೆ ಸಹಾಯಧನ/ ಪ್ರೋತ್ಸಾಹಧನ ನೀಡಲಾಗುತ್ತಿದೆ. 2022-23ನೇ ಸಾಲಿನಲ್ಲಿ ಒಟ್ಟಾರೆ ರೂ.7833.000 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಮಾರ್ಚ್-2023ರ ಅಂತ್ಯಕ್ಕೆ ಒಟ್ಟು ರೂ.7727.129 ಲಕ್ಷಗಳ ವೆಚ್ಚವಾಗಿದೆ. ವಿವರ ಕೆಳಕಂಡಂತಿದೆ. (ರೂ.ಲಕ್ಷಗಳಲ್ಲಿ)

| ಕ್ರ. ಸಂ. | ವಿವರ | ಅನುದಾನ | ವೆಚ್ಚ |
|---|---|---|---|
| 1 | ಪೂರಕವೆಚ್ಚಗಳು (015) | 100.000 | 80.555 |
| 2. | ಇತರೆವೆಚ್ಚಗಳು (059) | 800.000 | 792.476 |
| 3 | ಸಹಾಯಧನ(106) | 5133.000 | 5088.251 |
| 4 | ವಿಶೇಷಘಟಕಉಪಯೋಜನೆ(422) | 1250.000 | 1224.161 |
| 5 | ಗಿರಿಜನಉಪಯೋಜನೆ(423) | 550.000 | 541.686 |
| | ಒಟ್ಟು | 7833.000 | 7727.129 |

15.0 ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯಿದೆ 2013ರಡಿ ಬಳಕೆಯಾಗದೆ ಇರುವ ಮೊತ್ತ ಯೋಜನೆ:

2022-23ನೇ ಸಾಲಿನಲ್ಲಿ ಈ ಯೋಜನೆಯಡಿ ರೇಷ್ಮೆ ಹುಳುಸಾಕಾಣಿಕೆ ಸಲಕರಣೆಗೆ ಸಹಾಯಧನ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದ್ದು, ರೂ.5.700 ಲಕ್ಷಗಳ ಅನುದಾನ ಒದಗಿಸಿದ್ದು, ಮಾರ್ಚ್ 2023ರ ಅಂತ್ಯಕ್ಕೆ ರೂ.5.670 ಲಕ್ಷಗಳುವೆಚ್ಚವಾಗಿದೆ.

16.0 ಬೆಲೆ ಸ್ಥಿರೀಕರಣ ನಿಧಿ ಅನುದಾನದಿಂದ ಅನುಷ್ಠಾನಗೊಳ್ಳುವ ಕಾರ್ಯಕ್ರಮಗಳು ಯೋಜನೆ: 2851-00-107-1-51(059) (071)(100)(103)(106)(139)

2022-23ನೇ ಸಾಲಿನಲ್ಲಿ ಈ ಯೋಜನೆಯಡಿ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ:

ಅ) ಇತರೆ ವೆಚ್ಚಗಳು-ಇಲಾಖಾ ಸಂಸ್ಥೆಗಳಾದ ಸರ್ಕಾರಿ ರೇಷ್ಮೆಗೂಡಿನ ಮಾರುಕಟ್ಟೆಗಳು ಮತ್ತು ರೇಷ್ಮೆ ವಿನಿಮಯ ಕೇಂದ್ರಗಳ ನಿರ್ವಹಣೆಗಾಗಿ ರೂ.660.000 ಲಕ್ಷಗಳ ಅನುದಾನ ಒದಗಿಸಿದ್ದು, ಮಾರ್ಚ್-2023 ರ ಅಂತ್ಯಕ್ಕೆ ರೂ.649.501 ಲಕ್ಷಗಳು ವೆಚ್ಚವಾಗಿದೆ.

ಆ) ಕಟ್ಟಡ ವೆಚ್ಚಗಳು: 55 ರೇಷ್ಮೆಗೂಡು ಮಾರುಕಟ್ಟೆಗಳು ಮತ್ತು 10 ರೇಷ್ಮೆ ವಿನಿಮಯ ಕೇಂದ್ರಗಳ ಕಾಮಗಾರಿಗಳ ನಿರ್ವಹಣೆಗಾಗಿ ರೂ.75.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಮಾರ್ಚ್-2023ರ ಅಂತ್ಯಕ್ಕೆ ರೂ.71.760 ಲಕ್ಷಗಳು ವೆಚ್ಚವಾಗಿದೆ.

ಇ) ಧನಸಹಾಯ / ಪರಿಹಾರ: ರೇಷ್ಮೆ ಕೃಷಿಯಲ್ಲಿ ನೂತನ ತಾಂತ್ರಿಕತೆಗಳ ಅವಿಷ್ಕಾರಕ್ಕಾಗಿ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ, ಸಂಸ್ಥೆಗೆ ಧನಸಹಾಯ/ ಪರಿಹಾರ ಕಾರ್ಯಕ್ರಮಕ್ಕಾಗಿ ರೂ.10.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಮಾರ್ಚ್ -2023ರ ಅಂತ್ಯಕ್ಕೆ ರೂ.10.000 ಲಕ್ಷಗಳು ವೆಚ್ಚವಾಗಿದೆ.

ಈ) ಸಹಾಯಾನುದಾನ-ಸಾಮಾನ್ಯ: ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಯ ಆಡಳಿತಾತ್ಮಕ ವೆಚ್ಚಗಳಿಗಾಗಿ ಸಹಾಯಾನುದಾನ ಕಾರ್ಯಕ್ರಮಕ್ಕಾಗಿ ರೂ.300.000 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಮಾರ್ಚ್ 2023ರ ಅಂತ್ಯಕ್ಕೆ ರೂ.300.000 ಲಕ್ಷಗಳು ವೆಚ್ಚವಾಗಿದೆ.

ಉ) ಸಹಾಯಧನ: 2022-23ನೇ ಸಾಲಿನ ವಾರ್ಷಿಕ ಯೋಜನೆಯಲ್ಲಿ ಅನುಮೋದನೆ ಪಡೆದಿರುವ "ಮೈಸೂರು ಬಿತ್ತನೆ ಗೂಡಿಗೆ ಬೋನಸ್, ದ್ವಿತಳಿ ಬಿತ್ತನೆಗೂಡಿಗೆ ಪ್ರೋತ್ಸಾಹಧನ, ಉತ್ಪಾದನೆ ಮತ್ತು ಉತ್ಪಾದಕತೆ ಆಧಾರಿತ ಬಿತ್ತನೆಗೂಡಿಗೆ ಪ್ರೋತ್ಸಾಹಧನ, ರಕ್ಷಣಾತ್ಮಕದರ/ ರೇಷ್ಮೆಗೂಡಿಗೆ ಪ್ರೋತ್ಸಾಹಧನ, ಸ್ವಯಂಚಾಲಿತ ರೀಲಿಂಗ್ ಘಟಕಗಳಿಂದ ಉತ್ಪಾದಿಸುವ ದ್ವಿತಳಿ ಕಚ್ಚಾರೇಷ್ಮೆಗೆ ಪ್ರೋತ್ಸಾಹಧನ, ರೇಷ್ಮೆ ಕೃಷಿಚಟುವಟಿಕೆಗಳಿಗೆ ಮಹಿಳೆಯರು ಪಡೆಯುವ ಸಾಲದ ಮೇಲಿನ ಬಡ್ಡಿಗೆ ಶೇ.50ರಷ್ಟು ಸಹಾಯಧನ, ಚಿಟ್ಟೆ ಕೊರೆದಗೂಡುಗಳಿಂದ ಕರಕುಶಲವಸ್ತುಗಳನ್ನು ತಯಾರಿಸಲು ಶೇ.90ರಷ್ಟುಸಹಾಯಧನ, ರೀಲರುಗಳಿಗೆ ಒತ್ತೆಸಾಲ, ಗೂಡಿನ ನಂತರದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ರೀಲಿಂಗ್ ಸಲಕರಣೆಗಳಾದ ಬಾಯ್ಲರ್, ಸೋಲಾರ್ ವಾಟರ್ ಹೀಟರ್, ಜನರೇಟರ್/ಸೋಲಾರ್ ಪವರ್ ಜನರೇಟರ್, ಹೀಟ್ ರಿಕವರಿಯೂನಿಟ್‌ಗಳಿಗೆಸಹಾಯಧನ, ರೀಲಿಂಗ್ ಯಂತ್ರೋಪಕರಣಗಳಾದ ಸುಧಾರಿತ ಕಾಟೇಜ್ಬೇಸಿನ್/ಇಟಾಲಿಯನ್ ಕಾಟೇಜ್ ಬೇಸಿನ್‌ಗಳ ಅಳವಡಿಕೆಗೆ ಸಹಾಯಧನ, ರೀಲಿಂಗ್ ಶೆಡ್‌ಗಳ ನಿರ್ಮಾಣಕ್ಕೆ ಸಹಾಯಧನ, ಶೂನ್ಯ ಬಡ್ಡಿದರದಲ್ಲಿ ರೀಲರುಗಳಿಗೆ ದುಡಿಮೆ ಬಂಡವಾಳ" ಮುಂತಾದ ಕಾರ್ಯಕ್ರಮಗಳಿಗಾಗಿ ರೂ.5050.00 ಲಕ್ಷಗಳನ್ನು ಒದಗಿಸಿದ್ದು, ಮಾರ್ಚ್ 2023ರ ಅಂತ್ಯಕ್ಕೆ ರೂ.3472.793 ಲಕ್ಷಗಳು ವೆಚ್ಚವಾಗಿದೆ.

ಊ) ಪ್ರಧಾನ ಕಾಮಗಾರಿಗಳು: 55 ರೇಷ್ಮೆಗೂಡು ಮಾರುಕಟ್ಟೆಗಳು ಮತ್ತು 10 ರೇಷ್ಮೆ ವಿನಿಮಯ ಕೇಂದ್ರಗಳ ದುರಸ್ತಿ ಕಾಮಗಾರಿಗಳು ಮತ್ತು ನಿರ್ವಹಣೆ ಕಾರ್ಯಕ್ರಮಗಳಿಗಾಗಿ ರೂ.1015.000 ಲಕ್ಷಗಳ ಅನುದಾನವನ್ನು ಒದಗಿಸಿದ್ದು, ಮಾರ್ಚ್- 2023ರ ಅಂತ್ಯಕ್ಕೆ ರೂ.3472.793 ವೆಚ್ಚವಾಗಿದೆ.

2022-23 ನೇ ಸಾಲಿನಲ್ಲಿಒಟ್ಟಾರೆ ರೂ.7110.000 ಲಕ್ಷಗಳ ಅನುದಾನ ಒದಗಿಸಿದ್ದು, ಮಾರ್ಚ್ 2023ರ ಅಂತ್ಯಕ್ಕೆ ರೂ.4928.876 ಲಕ್ಷಗಳು ವೆಚ್ಚವಾಗಿದೆ. ವಿವರ ಕೆಳಕಂಡಂತಿದೆ

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ವಿವರ | ಅನುದಾನ | ವೆಚ್ಚ |
|---|---|---|---|
| 1 | ಇತರೆ ವೆಚ್ಚಗಳು(059) | 660.000 | 649.501 |
| 2 | ಕಟ್ಟಡ ವೆಚ್ಚಗಳು(071) | 75.000 | 71.760 |
| 3 | ಧನಸಹಾಯ/ಪರಿಹಾರ(100) | 10.000 | 10.000 |
| 4 | ಸಹಾಯಾನುದಾನ-ಸಾಮಾನ್ಯ(103) | 300.000 | 300.000 |
| 5 | ಸಹಾಯಧನ(106) | 5050.000 | 3472.793 |
| 6 | ಪ್ರಧಾನ ಕಾಮಗಾರಿಗಳು(139) | 1015.000 | 424.822 |
| | ಒಟ್ಟು | 7110.000 | 4928.876 |

17.0 ಕಟ್ಟಡ ಕಾಮಗಾರಿಗಳು ಯೋಜನೆ: 4851-00-107-1-01(139)(422) (423) (436)
ಪ್ರಧಾನ ಕಾಮಗಾರಿಗಳು- ಈ ಯೋಜನೆಯಡಿ ಇಲಾಖೆಯ ಕಟ್ಟಡಗಳ ದುರಸ್ತಿ, ನಿರ್ವಹಣೆ ಹಾಗೂ ಹೊಸ ಕಾಮಗಾರಿಗಳಿಗಾಗಿ 2022-23 ನೇ ಸಾಲಿನಲ್ಲಿ ರೂ.94.000ಲಕ್ಷಗಳ ಅನುದಾನ ಒದಗಿಸಿದ್ದು, ಮಾರ್ಚ್2023ರ ಅಂತ್ಯಕ್ಕೆ ರೂ.93.999 ಲಕ್ಷಗಳು ವೆಚ್ಚವಾಗಿದೆ.

ವಿಶೇಷ ಘಟಕ ಉಪಯೋಜನೆ & ಗಿರಿಜನ ಉಪಯೋಜನೆ- ಈ ಯೋಜನೆಯಡಿ ರೇಷ್ಮೆಹುಳು ಸಾಕಾಣಿಕೆ ಮನೆಗಳ ನಿರ್ಮಾಣಕ್ಕೆ ಸಹಾಯಧನ ಕಾರ್ಯಕ್ರಮ ಅನುಷ್ಠಾನಗೊಳಿಸಲು 2022-23ನೇ ಸಾಲಿನಲ್ಲಿ ರೂ.6.000 ಲಕ್ಷಗಳ ಅನುದಾನ ಒದಗಿಸಿದ್ದು, ಮಾರ್ಚ್-2023 ರ ಅಂತ್ಯಕ್ಕೆ ರೂ.6.000 ಲಕ್ಷಗಳು ವೆಚ್ಚವಾಗಿದೆ

18.0 ಅನುಸೂಚಿತ ಜಾತಿಗಳ ಉಪಯೋಜನೆ ಮತ್ತುಬುಡಕಟ್ಟು ಉಪಯೋಜನೆ ಕಾಯಿದೆ 2013ರಡಿ ಬಳಕೆಯಾಗದೆ ಇರುವ ಮೊತ್ತ ಯೋಜನೆ : 4851-00-107-0-01(423):

2022-23ನೇ ಸಾಲಿನಲ್ಲಿ ಈ ಯೋಜನೆಯಡಿ ಇಲಾಖಾ ಸಂಸ್ಥೆಗಳ ಕಾಮಗಾರಿ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದ್ದು, ರೂ.0.010 ಲಕ್ಷಗಳ ಅನುದಾನ ಒದಗಿಸಿದ್ದು, ಮಾರ್ಚ್- 2023ರ ಅಂತ್ಯಕ್ಕೆ ರೂ.0.009 ಲಕ್ಷಗಳು ವೆಚ್ಚವಾಗಿದೆ.


## 19.0 ರಾಜ್ಯ ರೇಷ್ಮೆ ಉದ್ಯಮಗಳು ಯೋಜನೆ /ರೇಷ್ಮೆ ಉದ್ಯಮಗಳು (ವಸ್ತ್ರೋದ್ಯಮಗಳು)

### 2851-00-107-1-01 / ಸರ್ಕಾರಿ ರೇಷ್ಮೆ ಕಾರ್ಖಾನೆ, ಸಂತೆಮರಹಳ್ಳಿ

### 2852- 08-202-2-01

ರಾಜ್ಯ ರೇಷ್ಮೆ ಉದ್ಯಮಗಳು ಯೋಜನೆಯಡಿ ಇಲಾಖೆಯಲ್ಲಿ ಸ್ಥಾಪಿಸಲಾದ ಸಂಸ್ಥೆಗಳ ನಿರ್ವಹಣೆ ಹಾಗೂ ಸೃಜಿಸಲಾದ ಹುದ್ದೆಗಳಲ್ಲಿ ನಿಯೋಜಿಸಿರುವ ಅಧಿಕಾರಿ/ ಸಿಬ್ಬಂದಿಗಳ ವೇತನ, ಭತ್ಯೆ ಮುಂತಾದವುಗಳಿಗೆ 2022-23ನೇ ಸಾಲಿನಲ್ಲಿ ರೂ.10645.590 ಲಕ್ಷಗಳ ಅನುದಾನ ಒದಗಿಸಿದ್ದು, ಮಾರ್ಚ್ 2023ರ ಅಂತ್ಯಕ್ಕೆ ರೂ.9999.865 ಲಕ್ಷಗಳು ವೆಚ್ಚವಾಗಿದೆ ಹಾಗೂ ರೇಷ್ಮೆ ಉದ್ಯಮಗಳು (ವಸ್ತ್ರೋದ್ಯಮಗಳು) ಯೋಜನೆ ಅಡಿ ಕೈಗಾರಿಕೆಗಳ ನಿರ್ವಹಣೆ ಹಾಗೂ ಸೃಜಿಸಲಾದ ಹುದ್ದೆಗಳಲ್ಲಿ ನಿಯೋಜಿಸಿರುವ ಅಧಿಕಾರಿ/ಸಿಬ್ಬಂದಿಗಳು/ಕಾರ್ಮಿಕರ ವೇತನ, ಭತ್ಯೆ ಮುಂತಾದವುಗಳಿಗೆ 2022-23ನೇ ಸಾಲಿನಲ್ಲಿ ರೂ.1060.620 ಲಕ್ಷಗಳ ಅನುದಾನ ಒದಗಿಸಿದ್ದು, ಮಾರ್ಚ್- 2023ರ ಅಂತ್ಯಕ್ಕೆ ರೂ.907.686 ಲಕ್ಷಗಳು ವೆಚ್ಚವಾಗಿದೆ.

## 20.0 ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು :




ಇಲಾಖೆಯ ಒಟ್ಟು ಫಲಾನುಭವಿ ಆಧಾರಿತ ಯೋಜನೆಗಳಿಗೆ ಒದಗಿಸಿದ ವಂಟನೆಯ 1/3 ಭಾಗವನ್ನು ಮಹಿಳಾ ಅಭಿವೃದ್ಧಿ ಕಾರ್ಯಕ್ರಮಕ್ಕೆ ಮೀಸಲಿರಿಸುವುದನ್ನು ಈ ಸಾಲಿನಲ್ಲಿಯೂ ಮುಂದುವರೆಸಲಾಗಿದೆ. ಎಲ್ಲಾ ಫಲಾನುಭವಿ ಆಧಾರಿತ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಲಾಗುತ್ತಿದೆ. 2022-23ನೇ ಸಾಲಿನಲ್ಲಿ ಮಹಿಳಾ ಉದ್ದೇಶಿತ ಆಯವ್ಯಯದ ವಿವಿಧ ಕಾರ್ಯಕ್ರಮಗಳಡಿ ಮಾರ್ಚ್-2023ರ ಅಂತ್ಯಕ್ಕೆ ಒಟ್ಟು ರೂ.2445.114 ಲಕ್ಷಗಳನ್ನು ಮಹಿಳಾ ಫಲಾನುಭವಿಗಳಿಗೆ ಒದಗಿಸಲಾಗಿದೆ.

## ಕೇಂದ್ರ ಪುರಸ್ಕೃತ ಯೋಜನೆ:

## 21.0 ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (PMKSY)

**2022-23 ನೇ ಸಾಲಿನ ಆಯವ್ಯಯದಲ್ಲಿ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ನಿಗದಿಪಡಿಸಿದ್ದ ಅನುದಾನ ರೂ.906.00 ಲಕ್ಷಗಳನ್ನು ನೋಡಲ್ ಇಲಾಖೆ ತೋಟಗಾರಿಕೆ ಇಲಾಖೆ (ಸಿಂಗಲ್ ನೋಡಲ್ ಏಜೆನ್ಸಿ ಖಾತೆ) ಗೆ ಸರ್ಕಾರವು ಬಿಡುಗಡೆ ಮಾಡಿರುತ್ತದೆ. ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಲು ತೋಟಗಾರಿಕೆ ಇಲಾಖೆಯ ಮುಖಾಂತರ ರೇಷ್ಮೆ ಇಲಾಖೆಗೆ, ಅನುದಾನ ಬಿಡುಗಡೆಯಾಗಿರುತ್ತದೆ.**




2022-23ನೇ ಸಾಲಿನಲ್ಲಿ ಈ ಯೋಜನೆಯಡಿ ಹನಿ ನೀರಾವರಿ ಘಟಕಗಳ ಅಳವಡಿಕೆಗಾಗಿ ಸಹಾಯಧನ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುತ್ತಿದ್ದು, ರೂ.1789.704 ಲಕ್ಷಗಳ ಅನುದಾನ ಒದಗಿಸಿದ್ದು,

ಮಾರ್ಚ್ 2023 ರ ಅಂತ್ಯಕ್ಕೆ ರೂ.1561.626 ಲಕ್ಷಗಳನ್ನು ಹನಿ ನೀರಾವರಿಗೆ ಸಹಾಯಧನವಾಗಿ ವೆಚ್ಚ ಮಾಡಲಾಗಿದ್ದು, 1911 ಹೆಕ್ಟೇರ್‌ಗಳಲ್ಲಿ ಹನಿ ನೀರಾವರಿ ಅಳವಡಿಸಲಾಗಿದೆ.

## ಕೇಂದ್ರ ವಲಯ ಯೋಜನೆ:

22.0 ಸಿಲ್ಕ್ ಸಮಗ್ರ ಯೋಜನೆ: ಕೇಂದ್ರ ರೇಷ್ಮೆ ಮಂಡಳಿಯ ಸಹಯೋಗದೊಂದಿಗೆ ಇಲಾಖೆಯು ಸಿಲ್ಕ್ ಸಮಗ್ರ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಈ ಯೋಜನೆಯಡಿಯಲ್ಲಿ ಪ್ರತ್ಯೇಕ ರೇಷ್ಮೆ ಹುಳು ಸಾಕಾಣಿಕೆಮನೆನಿರ್ಮಾಣ, ಸೋಂಕುನಿವಾರಕಗಳು, ಹಿಪ್ಪುನೇರಳೆ ತೋಟ ನಿರ್ವಹಣೆ ಸಲಕರಣೆ/ ಹುಳುಸಾಕಾಣಿಕೆ ಸಲಕರಣೆಗಳು, ಚಾಕಿ ಸಾಕಾಣಿಕಾ ಕೇಂದ್ರ ಸ್ಥಾಪನೆ, ಸ್ವಯಂಚಾಲಿತ ರೀಲಿಂಗ್ ಘಟಕ ಸ್ಥಾಪನೆ, ಮಲ್ಟಿಎಂಡ್ ರೀಲಿಂಗ್ ಘಟಕ ಸ್ಥಾಪನೆ, ಕಾಟೇಜ್ ಬೇಸಿನ್ ಘಟಕಗಳ ಉನ್ನತೀಕರಣ, ಪ್ಯೂಪ ಪ್ರೋಸೆಸ್ಸಿಂಗ್ ಘಟಕ ಸ್ಥಾಪನೆ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 2022-23 ನೇ ಸಾಲಿನಲ್ಲಿ ಕೇಂದ್ರ ಪಾಲಾಗಿ ರೂ. 7149.828 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಮಾರ್ಚ್-2023 ರ ಅಂತ್ಯಕ್ಕೆ ರೂ. 7149.828 ಲಕ್ಷಗಳು ವೆಚ್ಚವಾಗಿರುತ್ತವೆ.

## 23.0 ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ :



ಕೇಂದ್ರ ಪುರಸ್ಕೃತ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯನ್ನು 2011-12ನೇ ಸಾಲಿನಿಂದ ಇಲಾಖೆಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ 2022-23ನೇ ಸಾಲಿಗೆ ಪ್ರಮುಖ ಕಾರ್ಯಕ್ರಮಗಳಾದ ಗುಣಮಟ್ಟದ ಉತ್ಪಾದನೆಗಾಗಿ ಮಣ್ಣಿನ ಫಲವತ್ತತೆ ಸಮೃದ್ಧಿಗೆ ಪ್ಯಾಕೇಜ್, ಮೈಸೂರು / ದ್ವಿತಳಿ ಬಿತ್ತನೆ ಬೆಳೆಗಾರರ ಹಿಪ್ಪುನೇರಳೆ ತೋಟದ ಟ್ರೆಂಚಿಂಗ್ ಮತ್ತು ಮಲ್ಚಿಂಗ್‌ಗಾಗಿ ಸಹಾಯಧನ, ಬಿದರಿನ ಚಂದ್ರಿಕೆ ಸರಬರಾಜಿಗೆ ಸಹಾಯಧನ, ಗುಣಮಟ್ಟದ ಹಿಪ್ಪುನೇರಳೆ ಉತ್ಪಾದನೆಗೆ ಸಾವಯವ ಸಸ್ಯ ಆಹಾರ, ಊಜಿ ನಿಯಂತ್ರಣಕ್ಕೆ ಊಜಿ ಫೆರಮೋನ್ ಟ್ರಾಫ್‌ನ ಪ್ರಾತ್ಯಕ್ಷತೆ ಹಾಗೂ ಜನಪ್ರಿಯತೆ, ಬೇರು ಕೊಳೆ ನಿಯಂತ್ರಣಕ್ಕೆ ರಾಟ್ ಫಿಕ್ಸ್ ಮತ್ತು ನೆಮಟೋಡ್ ನಿಯಂತ್ರಣಕ್ಕೆ ನೀಮಾಹಾರಿ ಪ್ರಾತ್ಯಕ್ಷತೆ ಹಾಗೂ ಜನಪ್ರಿಯತೆ, ಬಿತ್ತನೆ ಮಾರುಕಟ್ಟೆಗಳ ಬಲವರ್ಧನೆ ( ಕೆಂಪನಹಳ್ಳಿ, ತುಮಕೂರು, ಕುಣಿಗಲ್, ಸೋಲೂರು, ವಿ.ಜಿದೊಡ್ಡಿ, ಅತ್ತಿಬೆಲೆ) ರೇಷ್ಮೆ ಸಮೃದ್ಧಿ ಯೋಜನೆ, ಪಿ2 ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ ಕೆ.ಪಿ.ದೊಡ್ಡಿ, ರಾಮನಗರದ ತಾಲ್ಲೂಕು/ಜಿಲ್ಲೆ ಇದರ ಬಲವರ್ಧನೆ ಮತ್ತು ಉನ್ನತೀಕರಣ, ಮೈಸೂರು ಬಿತ್ತನೆ ವಲಯ ಕುಣಿಗಲ್‌ನಲ್ಲಿ ಶೈತ್ಯಾಗಾರದ ಕಿರುಘಟಕ, ಪಿ1 ಬಿತ್ತನೆಕೋಠಿ, ಕುದೂರು, ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ ಇದರ ಬಲವರ್ಧನೆ ಮತ್ತು ಉನ್ನತೀಕರಣ ಪಿ3, ಪಿ2 ಕೃಷಿಕ್ಷೇತ್ರಗಳ ಬಲವರ್ಧನೆ ಮತ್ತುಉನ್ನತೀಕರಣ (ಕುಂಬಾರಹಳ್ಳಿ, ಕಗ್ಗುಂಡಿ, ಶಿರಾ, ಹೇರೂರು), ಕಾರ್ಯಕ್ರಮಗಳಿಗೆ ಮತ್ತು 2021-22 ನೇ ಸಾಲಿನಲ್ಲಿ ಉಳಿಕೆಯಾದ ರೂ.50.00 ಲಕ್ಷ ಸೇರಿ 2022-23 ನೇ ಸಾಲಿನಲ್ಲಿ ರೂ.524.41 ಲಕ್ಷ ಮಾತ್ರ ಬಿಡುಗಡೆಯಾಗಿದ್ದು, ರೂ.409.39 ಲಕ್ಷ ವೆಚ್ಚ ಭರಿಸಲಾಗಿದೆ.

## 24.0 ಸಾಲ ಸೌಲಭ್ಯಗಳು:

ಕ್ರೆಡಿಟ್ ಕಾರ್ಯಕ್ರಮದಡಿ ರೇಷ್ಮೆ ಕೃಷಿ ಚಟುವಟಿಕೆಗಳನ್ನು ನಡೆಸಲು ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ಮತ್ತು ಭೂಸಹಕಾರ ಅಭಿವೃದ್ಧಿ ಬ್ಯಾಂಕುಗಳು ಸಾಲದ ರೂಪದಲ್ಲಿ ಧನಸಹಾಯ ಒದಗಿಸುತ್ತವೆ. 2022-23ನೇ ಸಾಲಿನಲ್ಲಿ ರೇಷ್ಮೆ ಬೆಳೆಗಾರರು ಮತ್ತು ರೇಷ್ಮೆನೂಲು ಬಿಚ್ಚಾಣಿಕೆದಾರರಿಗೆ ಹಿಪ್ಪುನೇರಳೆ ವ್ಯವಸಾಯ, ಸಲಕರಣೆ ಖರೀದಿ, ಹುಳು ಸಾಕುವ ಮನೆ ನಿರ್ಮಿಸಲು, ಹನಿ ನೀರಾವರಿ ಹಾಗೂ ರೀಲಿಂಗ್ ಘಟಕಗಳ ಅಳವಡಿಕೆ ಸೌಲಭ್ಯಗಳಿಗಾಗಿ ಮಾರ್ಚ್-2023 ರ ಅಂತ್ಯಕ್ಕೆ ಆರ್ಥಿಕ ರೂ.994 ಲಕ್ಷಗಳ ವಾರ್ಷಿಕ ಗುರಿ ಹೊಂದಲಾಗಿದ್ದು, ರೂ.463.71ಲಕ್ಷಗಳ ಸಾಲ ಮಂಜೂರಾಗಿದ್ದು, ಶೇ.47 ರಷ್ಟು ಪ್ರಗತಿಯಾಗಿರುತ್ತದೆ.

## 25.0 ಮಾನವ ಸಂಪನ್ಮೂಲ ಅಭಿವೃದ್ಧಿ / ತರಬೇತಿ:

**25.1** ಇಲಾಖೆಯು 6 ರೇಷ್ಮೆ ತರಬೇತಿ ಸಂಸ್ಥೆಗಳನ್ನು ಹೊಂದಿದೆ. ಈ ತರಬೇತಿ ಸಂಸ್ಥೆಗಳು ರೇಷ್ಮೆಬೆಳೆಗಾರರು, ರೇಷ್ಮೆನೂಲು ಬಿಚ್ಚಾಣಿಕೆದಾರರು ಹಾಗೂ ಉದ್ಯಮಶೀಲರುಗಳಿಗೆ ತರಬೇತಿ ನೀಡುತ್ತಿವೆ. ಸಂಶೋಧನಾ ಕೇಂದ್ರಗಳು ಅಭಿವೃದ್ಧಿಪಡಿಸಿದ ಹೊಸ ತಾಂತ್ರಿಕತೆಗಳನ್ನು ಪ್ರಾತ್ಯಕ್ಷತೆಗಳ ಮೂಲಕ ಪಸರಿಸುವಲ್ಲಿ ಈ ತರಬೇತಿ ಸಂಸ್ಥೆಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಇದಲ್ಲದೆ ಇಲಾಖೆಯ ತಾಂತ್ರಿಕ ಸಿಬ್ಬಂದಿಗಳಿಗೆ ಪುನರ್ಮನನ ತರಬೇತಿಯನ್ನು ಒದಗಿಸಿ ಹೊಸ ತಾಂತ್ರಿಕತೆಗಳ ಬಗ್ಗೆ ತಿಳುವಳಿಕೆ ನೀಡಲಾಗುತ್ತಿದೆ. ಚಿಟ್ಟೆ ಕೊರೆದ ಗೂಡುಗಳಿಂದ ಕರಕುಶಲ ವಸ್ತುಗಳಾದ ಹೂಗುಚ್ಛಗಳು, ಹಾರಗಳು, ಶುಭಾಶಯ ಪತ್ರಗಳು, ಇತ್ಯಾದಿಗಳನ್ನು ತಯಾರಿಸುವ ಬಗ್ಗೆಯೂ ಮಹಿಳಾ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ. ಈ ತರಬೇತಿ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಪ್ರತ್ಯೇಕ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಇವುಗಳ ಜೊತೆಗೆ, ಸರ್ಕಾರಿ ರೇಷ್ಮೆ ಕೃಷಿ ಕ್ಷೇತ್ರ, ಹಿರೇಬಾಗೇವಾಡಿ, ಬೆಳಗಾವಿ ಜಿಲ್ಲೆ ಹಾಗೂ ಮಹಿಳಾ ಪ್ರಾತ್ಯಕ್ಷತೆ ಕ್ಷೇತ್ರ, ಬೀದರ್ ಹಾಗೂ ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿಯೂ ಸಹ ರೇಷ್ಮೆ ಬೆಳೆಗಾರರಿಗೆ ತರಬೇತಿಯನ್ನು ನೀಡಲಾಗುತ್ತಿದೆ.

2022-23ನೇ ಸಾಲಿನಲ್ಲಿ ಏರ್ಪಡಿಸಿದ ವಿವಿಧ ತರಬೇತಿ ಕಾರ್ಯಕ್ರಮಗಳ ಪ್ರಗತಿ ವಿವರ ಕೆಳಕಂಡಂತಿದೆ:

| ಕ್ರ. ಸಂ | ತರಬೇತಿಯ ವಿವರ | ಭಾಗವಹಿಸಿದವರಸಂಖ್ಯೆ (ಮಾರ್ಚ್-2023ರ ಅಂತ್ಯಕ್ಕೆ) |
|---|---|---|
| 1 | ಅಧಿಕಾರಿಗಳ ಕಾರ್ಯಾಗಾರ | 90 |
| 2 | ತಾಂತ್ರಿಕ ಸಿಬ್ಬಂದಿಗಳಿಗೆ ಪುನರ್ಮನನ ತರಬೇತಿ | 358 |
| 3 | ಚಿಟ್ಟೆ ಕೊರೆದ ಗೂಡಿನ ಕರಕುಶಲ ತರಬೇತಿ | 100 |
| 4 | ಕ್ಷೇತ್ರ ಮಟ್ಟದಲ್ಲಿ ರೈತರಿಗೆ ಒಂದು ದಿನದ ತರಬೇತಿ | 8864 |
| 5 | ರೇಷ್ಮೆನೂಲು ಬಿಚ್ಚಾಣಿಕೆದಾರರಿಗೆ ತರಬೇತಿ | 60 |
| | ಎಲ್ಲಾ ಒಟ್ಟು | **9472** |

ಮೇಲ್ಕಂಡ ತರಬೇತಿಗಳಲ್ಲದೇ, 2022-23ನೇ ಸಾಲಿನ ಮಾರ್ಚ್-2023ರ ಅಂತ್ಯಕ್ಕೆ "ರೈತರಿಂದ ರೈತರಿಗೆ ತರಬೇತಿ"ಕಾರ್ಯಕ್ರಮದಡಿ 22 ಜಿಲ್ಲೆಗಳ 46 ದ್ವಿತಳಿ ಕ್ಲಸ್ಟರ್ ವ್ಯಾಪ್ತಿಯಲ್ಲಿರುವ ಪ್ರಗತಿಪರ ದ್ವಿತಳಿ ರೇಷ್ಮೆ ಬೆಳೆಗಾರರಿಂದ 2570 ಮಂದಿ ರೇಷ್ಮೆ ಬೆಳೆಗಾರರಿಗೆ ಗ್ರಾಮ ಮಟ್ಟದಲ್ಲಿ ತರಬೇತಿ ನೀಡಲಾಗಿದೆ.

**25.2** ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ತಲಘಟ್ಟಪುರ, ರೇಷ್ಮೆ ಹುಳುಬಿತ್ತನೆ ಪರೀಕ್ಷಾ ಪ್ರಯೋಗಾಲಯ, ಕೊಡತಿ, ಕೇಂದ್ರೀಯ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ, ಮೈಸೂರು ಮತ್ತು ಕೇಂದ್ರೀಯ ರೇಷ್ಮೆ ತಾಂತ್ರಿಕ ಸಂಶೋಧನೆ ಸಂಸ್ಥೆ, ಬೆಂಗಳೂರು ಇಲ್ಲಿ ಇಲಾಖೆಯ ತಾಂತ್ರಿಕ ಅಧಿಕಾರಿ:ಸಿಬ್ಬಂದಿಗಳಿಗೆ ರೇಷ್ಮೆ ಕೃಷಿ ಅಭಿವೃದ್ಧಿಗಾಗಿ ಇತ್ತೀಚಿಗೆ ಹೊರತಂದಿರುವ ತಾಂತ್ರಿಕತೆಗಳ ಬಗ್ಗೆ ತರಬೇತಿ ನೀಡಲಾಗುತ್ತಿದೆ. ಇತರ ತರಬೇತಿ ಸಂಸ್ಥೆಗಳಾದ ಹೈದರಾಬಾದಿನ Extension Education Instituteಮತ್ತು MANAGE (National Institute of Agricultural Extension Management) ಹಾಗೂ ಮೈಸೂರಿನಲ್ಲಿರುವ ರಾಜ್ಯ ಆಡಳಿತ ತರಬೇತಿ ಸಂಸ್ಥೆ ಮತ್ತು ಶ್ರೀಅಬ್ದುಲ್ ನಜೀರ್ ಸಾಬ್ ಗ್ರಾಮೀಣ ಅಭಿವೃದ್ಧಿ ತರಬೇತಿ ಸಂಸ್ಥೆ ಮತ್ತು ಆಯಾ ಜಿಲ್ಲೆಯ ತರಬೇತಿ ಸಂಸ್ಥೆ, ಬೆಂಗಳೂರಿನ ವಿತ್ತೀಯ ಕಾರ್ಯನೀತಿ ಸಂಸ್ಥೆ, EMPRI ಹಾಗೂ ರಾಜ್ಯದ ಇ-ಆಡಳಿತ ಕೇಂದ್ರದ ಸಹಭಾಗಿತ್ವದಲ್ಲಿ ನವದೆಹಲಿಯ ಐ.ಐ.ಪಿ.ಎ.ಯಲ್ಲಿನ ವಿಶೇಷ ತರಬೇತಿ ಕಾರ್ಯಕ್ರಮಗಳಿಗೂ ಸಹಾ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ.

## 26.0 ದೃಶ್ಯ – ಶ್ರಾವ್ಯ ಮತ್ತು ಪ್ರಚಾರ:

ಇಲಾಖೆಯು ``ರೇಷ್ಮೆ ಕೃಷಿ" ದ್ವೈ ಮಾಸಿಕ ಸಂಚಿಕೆಯನ್ನು ಹೊರತರುತ್ತಿದ್ದು, ಇದರಲ್ಲಿ ರೇಷ್ಮೆ ಕೃಷಿ ಚಟುವಟಿಕೆಗಳು, ನೂತನ ತಾಂತ್ರಿಕತೆಗಳು, ಋತುಮಾನ ಹಾಗೂ ಹವಾಮಾನಕ್ಕೆ ಅನುಗುಣವಾಗಿ ಸೂಕ್ತಸಲಹೆಗಳು, ರಾಜ್ಯದ ರೇಷ್ಮೆ ಉದ್ಯಮದ ಭಾಗೀದಾರರ ಯಶೋಗಾಥೆಗಳು, ವೈಜ್ಞಾನಿಕ ಹಾಗೂ ಉಪಯುಕ್ತ ಮಾಹಿತಿಗಳನ್ನು ಒಳಗೊಂಡ ಲೇಖನಗಳನ್ನು ಮತ್ತು ರೇಷ್ಮೆಗೂಡು, ನೂಲಿನ ಧಾರಣೆಗಳನ್ನು ಪ್ರಕಟಿಸಲಾಗುತ್ತಿದೆ.

2022-23ನೇ ಸಾಲಿನ ಅಭಿವೃದ್ಧಿ ಚಟುವಟಿಕೆಗಳು, ತಾಂತ್ರಿಕತೆ, ಇಲಾಖೆಯ ಯೋಜನೆ ಹಾಗೂ ಕಾರ್ಯಕ್ರಮಗಳ ಕುರಿತು ದೂರದರ್ಶನ, ಆಕಾಶವಾಣಿ ಮತ್ತು ಮುದ್ರಣ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳಲಾಗಿದೆ.

2022-23ನೇ ಸಾಲಿನ ಮಾರ್ಚ್-2023ರ ಅಂತ್ಯಕ್ಕೆ ಇಲಾಖೆಯ ಮುದ್ರಣ ಕಾರ್ಯಗಳು ಹಾಗೂ ಪ್ರಚಾರ ಕಾರ್ಯಕ್ರಮಗಳಿಗಾಗಿ ರೂ.14.34 ಲಕ್ಷಗಳ ವೆಚ್ಚ ಭರಿಸಲಾಗಿದೆ.

## 27.0 ರೇಷ್ಮೆ ರೈತ ಉತ್ಪಾದಕ ಸಂಸ್ಥೆ (ಎಫ್.ಪಿ.ಓ)

2021-22 ನೇ ಸಾಲಿನಲ್ಲಿ ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸವಿನೆನಪಿಗಾಗಿ 750 ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆಗೆ ಕಾರ್ಯಕ್ರಮ ಘೋಷಿಸಲಾಗಿದೆ. ಸದರಿ ಯೋಜನೆಯಡಿ ರೇಷ್ಮೆ ಇಲಾಖೆಗೆ ಮೂರು ವರ್ಷಗಳ ಅವಧಿಗೆ 45 ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆಗೆ ಗುರಿ ನೀಡಲಾಗಿದೆ. ಯೋಜನಾ ಮೊತ್ತ ಪ್ರತಿ ರೈತ ಉತ್ಪಾದಕ ಸಂಸ್ಥೆಗೆ ರೂ.29.784 ಲಕ್ಷ. ಅದರಂತೆ 2022-23 ನೇ ಸಾಲಿನ 15 ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆಗೆ ಗುರಿ ಇದ್ದು, 2022-23ನೇ ಸಾಲಿನ ಅಂತ್ಯಕ್ಕೆ 20 ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆಯಾಗಿರುತ್ತದೆ.

ಜಲಾನಯನ ಅಭಿವೃದ್ಧಿ ಇಲಾಖೆಯನ್ನು ವಿವಿಧ ಇಲಾಖೆಗಳಲ್ಲಿ ಅಮೃತ ರೈತ ಉತ್ಪಾದಕ ಸಂಸ್ಥೆಗಳ ರಚನೆಗಾಗಿ ನೋಡಲ್ ಇಲಾಖೆಯೆಂದು ಆದೇಶವಾಗಿರುತ್ತದೆ. 2022-23ನೇ ಸಾಲಿನಲ್ಲಿ ಅಮೃತ ರೈತ ಉತ್ಪಾದಕ ಸಂಸ್ಥೆಗಳ ರಚನೆ ಮತ್ತು ನಿರ್ವಹಣೆಗಾಗಿ ಜಲಾನಯನ ಅಭಿವೃದ್ಧಿ ಇಲಾಖೆಯಿಂದ ರೂ. 200.88 ಲಕ್ಷಗಳು ಬಿಡುಗಡೆಯಾಗಿದ್ದು, ರೂ.198.26 ಲಕ್ಷಗಳ ಅನುದಾನವನ್ನು ವೆಚ್ಚ ಮಾಡಲಾಗಿದೆ.

## 28.0 2022-23ನೇ ಸಾಲಿನ ಪ್ರಮುಖ ಸಾಧನೆಗಳು (ಮಾರ್ಚ್-2023 ರ ಅಂತ್ಯಕ್ಕೆ)

28.1 2021-22ನೇ ಸಾಲಿನಲ್ಲಿ 108018.51 ಹೆಕ್ಟೇರ್ ಹಿಪ್ಪು ನೇರಳೆ ವಿಸ್ತೀರ್ಣವಿತ್ತು. 2022-23ರ ಮಾರ್ಚ್ ಅಂತ್ಯಕ್ಕೆ 112658.19 ಹೆಕ್ಟೇರ್ ಹಿಪ್ಪುನೇರಳೆ ವಿಸ್ತೀರ್ಣ ಏರಿಕೆಯಾಗಿದ್ದು, 4639.68 ಹೆಕ್ಟೇರ್ ಹೆಚ್ಚುವರಿ ಹಿಪ್ಪುನೇರಳೆ ವಿಸ್ತೀರ್ಣ ದಾಖಲಾಗಿರುತ್ತದೆ. (ಶೇ. 4.3 ಹೆಚ್ಚಳ)

28.2 2021-22ನೇ ಸಾಲಿನಲ್ಲಿ 16065 ಮೆ.ಟನ್ ದ್ವಿತಳಿ ಗೂಡು ಉತ್ಪಾದನೆಯಾಗಿದ್ದು, 2438 ಮೆ.ಟನ್ ದ್ವಿತಳಿ ರೇಷ್ಮೆ ಉತ್ಪಾದಿಸಲಾಗಿತ್ತು. 2022-23ನೇ ಮಾರ್ಚ್ ಅಂತ್ಯಕ್ಕೆ 17654.875 ಮೆ.ಟನ್ ದ್ವಿತಳಿ ಗೂಡು ಮತ್ತು 2678.444 ಮೆ.ಟನ್ ದ್ವಿತಳಿ ರೇಷ್ಮೆ ಉತ್ಪಾದಿಸಲಾಗಿದೆ.

28..3. ರಾಮನಗರ, ಕೋಲಾರ, ಶಿಡ್ಲಘಟ್ಟ, ಕನಕಪುರ, ಚಿಂತಾಮಣಿ, ವಿಜಯಪುರ, ಚನ್ನಪಟ್ಟಣ, ಕೊಳ್ಳೆಗಾಲ, ಚಿಕ್ಕಬಳ್ಳಾಪುರ, ಸಂತೇಮರಹಳ್ಳಿ, ಮಳವಳ್ಳಿ ಮತ್ತು ಮೈಸೂರು ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಇ-ಹಣಪಾವತಿಯನ್ನು ಪ್ರಾರಂಭಿಸಲಾಗಿದ್ದು, ಮೇಲಿನ ಮಾರುಕಟ್ಟೆಗಳಲ್ಲಿ ಶೇ.100 ರಷ್ಟು ಇ-ಹಣ ಪಾವತಿ ಮಾಡಲಾಗುತ್ತಿದೆ. ಉಳಿದ ಮಾರುಕಟ್ಟೆಗಳಲ್ಲಿ ಇ-ಹಣಪಾವತಿಗೆ ಕ್ರಮವಹಿಸಲಾಗುತ್ತಿದೆ.

28.4. ರೇಷ್ಮೆಗೂಡಿನ ವಹಿವಾಟಿನಲ್ಲಿ ಪಾರದರ್ಶಕತೆ ಹಾಗೂ ಗೂಡುಗಳಿಗೆ ಸ್ಪರ್ಧಾತ್ಮಕ ದರ ನಿಗದಿಗಾಗಿ ಇ-ಹರಾಜು ಪದ್ಧತಿಯನ್ನು ಕೊಳ್ಳೇಗಾಲ, ರಾಮನಗರ, ಶಿಡ್ಲಘಟ್ಟ, ಕೋಲಾರ, ಕನಕಪುರ, ಚನ್ನಪಟ್ಟಣ, ವಿಜಯಪುರ, ಮಳವಳ್ಳಿ, ಹೆಚ್.ಕ್ರಾಸ್ ಶ್ರೀನಿವಾಸಪುರ, ಕ್ಯಾಲನೂರು ಮತ್ತು ಚಿಂತಾಮಣಿ ಮಾರುಕಟ್ಟೆಗಳಲ್ಲಿ ಅಳವಡಿಸಲಾಗಿದೆ. ಪ್ರಸ್ತುತ ಶೇ.95ಕ್ಕಿಂತಲೂ ಹೆಚ್ಚಿನ ರೇಷ್ಮೆಗೂಡು ಇ-ಹರಾಜು ಮೂಲಕ ವಿಲೇವಾರಿಯಾಗುತ್ತಿದೆ.

28.5. ರಾಮನಗರ, ಕೊಳ್ಳೇಗಾಲ, ಶಿಡ್ಲಘಟ್ಟ, ಕೋಲಾರ, ಕನಕಪುರ, ಚನ್ನಪಟ್ಟಣ ಮತ್ತು ಚಿಂತಾಮಣಿ ಮಾರುಕಟ್ಟೆಗಳಲ್ಲಿ ರೇಷ್ಮೆಗೂಡು ಪರೀಕ್ಷಾ ಪ್ರಯೋಗಾಲಯ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ಕನಕಪುರ ಕೊಳ್ಳೆಗಾಲ ಮತ್ತು ಚನ್ನಪಟ್ಟಣ ಮಾರುಕಟ್ಟೆಗಳಲ್ಲಿ ರೇಷ್ಮೆಗೂಡು ಶ್ರೇಣೀಕರಣವನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿದೆ.

******

# ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ

## ವಾರ್ಷಿಕ ವರದಿ (2022-23)

ಕರ್ನಾಟಕ ರಾಜ್ಯ ರೇಷ್ಮೆ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯು ಒಂದು ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಾಗಿದ್ದು, ರಾಜ್ಯದಲ್ಲಿ ರೇಷ್ಮೆ ಕೃಷಿ ಅಭಿವೃದ್ಧಿಗೆ ತಾಂತ್ರಿಕ ಪರಿಹಾರಗಳನ್ನು ಒದಗಿಸುವ ಆಶಯದೊಂದಿಗೆ ಕರ್ನಾಟಕ ಸರ್ಕಾರ ಸ್ಥಾಪಿಸಿದೆ. ಈ ಸಂಸ್ಥೆಯು ರೇಷ್ಮೆ ಉದ್ಯಮದ ಅಭಿವೃದ್ಧಿಗಾಗಿ ರಾಜ್ಯ ರೇಷ್ಮೆ ಇಲಾಖೆಯೊಂದಿಗೆ ಜಂಟಿಯಾಗಿ ಕಾರ್ಯನಿರ್ವಹಿಸುತ್ತದೆ.

2022-23ರ ವರದಿಯ ಅವಧಿಯಲ್ಲಿ, ಸಂಸ್ಥೆಯು ತನ್ನ ಸಂಶೋಧನಾ ಕಾರ್ಯಕ್ರಮಗಳನ್ನುಎಲ್ಲಾ ನಾಲ್ಕು ವಿಭಾಗಗಳಲ್ಲಿ ಅಂದರೆ ಹಿಪ್ಪುನೇರಳೆ ಕೃಷಿ, ರೇಷ್ಮೆ ಕೃಷಿ, ರೇಷ್ಮೆ ತಂತ್ರಜ್ಞಾನ ಮತ್ತು ವಿಸ್ತರಣೆ ಮತ್ತು ತರಬೇತಿ ವಿಭಾಗಗಳಲ್ಲಿ ಜಾರಿಗೆ ತಂದಿದೆ.

### 1. ಹಿಪ್ಪುನೇರಳೆವಿಭಾಗ

ಹಿಪ್ಪುನೇರಳೆ ವಿಭಾಗದಲ್ಲಿ ಸಂಶೋಧನೆಮತ್ತು ಅಭಿವೃದ್ಧಿ ಯೋಜನೆಗಳನ್ನು ಮೂರು ಶಾಖೆಗಳಾದ ಹಿಪ್ಪುನೇರಳೆನಿರ್ವಹಣಾಶಾಖೆ, ಹಿಪ್ಪುನೇರಳೆ ತಳಿಅಭಿವೃದ್ಧಿ ಮತ್ತು ತಳಿವಿಜ್ಞಾನ ಶಾಖೆ ಮತ್ತು ಹಿಪ್ಪುನೇರಳೆ ರೋಗ ಮತ್ತು ಸೂಕ್ಷ್ಮಾಣುಜೀವಿ ಶಾಖೆಗಳಲ್ಲಿ ಕೈಗೊಳ್ಳಲಾಗುತ್ತಿದೆ. ವಿಭಾಗದಲ್ಲಿಒಟ್ಟು 15 (ಹದಿನೈದು) ಸಂಶೋಧನೆ ಯೋಜನೆಗಳು 07 (ಏಳು) ಪ್ರಧಾನ ಕ್ಷೇತ್ರಗಳ ಅಡಿಯಲ್ಲಿ ಮತ್ತು 02 (ಎರಡು) ಸೇವಾ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

### A. ಹಿಪ್ಪುನೇರಳೆನಿರ್ವಹಣಾಶಾಖೆ:

ಹಿಪ್ಪುನೇರಳೆ ನಿರ್ವಹಣಾ ಶಾಖೆಯಲ್ಲಿ ಒಟ್ಟು ಒಂಬತ್ತು (09) ಸಂಶೋಧನೆ ಯೋಜನೆಗಳು ಮತ್ತು ಒಂದು ಸೇವಾ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಪುನ:ಶ್ಚೇತನದ ಯೋಜನೆ ಅಡಿಯಲ್ಲಿ ಹಿಪ್ಪುನೇರಳೆ ಕೃಷಿಯಲ್ಲಿ ಸಮಗ್ರಕೃಷಿ ಪದ್ಧತಿಗಳನ್ನುಅಭಿವೃದ್ಧಿಪಡಿಸಲು, ಮರ ಕೃಷಿ ಪದ್ಧತಿಯಲ್ಲಿ ಬೆಳೆದ ತೋಟಗಳಲ್ಲಿಅಂತರ ಬೆಳೆದು, ಅವಶ್ಯಕ ಮಾಹಿತಿಯನ್ನು ಕಲೆಹಾಕಲಾಗಿದೆ. ವಿವಿಧ ಸಂಶೋಧನೆಗಳ ಅಡಿಯಲ್ಲಿ ಮಣ್ಣು ಪರೀಕ್ಷಾಧಾರಿತ ರಸಗೊಬ್ಬರಗಳ ಬಳಕೆ, ಹಸಿರುಗೊಬ್ಬರಗಳುಮತ್ತುಟ್ರಂಚಿಂಗ್ಮತ್ತುಮಲಚ್ಚಿಂಗ್, ವಿವಿಧ ಹಿಪ್ಪುನೇರಳೆ ತಳಿಗಳ ಪ್ರಾತ್ಯಕ್ಷತೆ, ಮರಕೃಷಿ ಪದ್ಧತಿ ಮತ್ತುಮರ ಕೃಷಿಯಲ್ಲಿ ಕಟಾವು ಪದ್ಧತಿ ಪ್ರಾತ್ಯಕ್ಷತೆಗಳನ್ನು ಅನುಷ್ಠಾನಗೊಳಿಸಲಾಗಿದೆ. ರಾಜ್ಯದ ಹಿಪ್ಪುನೇರಳೆ ತೋಟಗಳ ಮಣ್ಣಿನ ಮಾದರಿಗಳ ವಿಶ್ಲೇಷಣೆ ಮಣ್ಣು ಆರೋಗ್ಯ ಪತ್ರಗಳ ವಿತರಣೆಮಾಡಲಾಗಿದೆ. ಸಂಸ್ಥೆಯ ಅಂತರಿಕ ಅನುದಾನದ ಅಡಿಯಲ್ಲಿ ಪಂಚಗವ್ಯ ಮತ್ತು ಜೀವಾಮೃತ ತಯಾರಿಕೆ ಮತ್ತುಇವುಗಳ ಬಳಕೆಯಿಂದ ಹಿಪ್ಪುನೇರಳೆ ಬೆಳವಣಿಗೆ ಮತ್ತು ಇಳುವರಿಯನ್ನು ಮತ್ತು ಈ ತೋಟದ ಸೊಪ್ಪನ್ನುಹುಳು ಸಾಕಾಣಿಕೆಯ ಮೇಲೆ, ಬೀರುವ ಪರಿಣಾಮವನ್ನು ಅಧ್ಯಯನ ಮಾಡಲಾಗಿದೆ.

### B. ಹಿಪ್ಪುನೇರಳೆತಳಿಅಭಿವೃದ್ಧಿಮತ್ತುತಳಿವಿಜ್ಞಾನಶಾಖೆ:

ಹಿಪ್ಪುನೇರಳೆ ತಳಿ ಅಭಿವೃದ್ಧಿ ಮತ್ತು ತಳಿ ವಿಜ್ಞಾನ ಶಾಖೆ ಒಟ್ಟುನಾಲ್ಕು (04) ಸಂಶೋಧನೆ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಚಾಕಿಹುಳುಸಾಕಾಣಿಕೆಗೆ ಸೂಕ್ತವಾದ ಸುವರ್ಣ-3 ಹಿಪ್ಪುನೇರಳೆ ತಳಿಯನ್ನು ಸಸಿಮಡಿಗಳಲ್ಲಿಒಟ್ಟು 16,750 ಗಿಡಗಳನ್ನು ರೈತರಿಗೆ ವಿತರಿಸಿ 18,000 ಗಿಡಗಳನ್ನುಬೆ ಳೆಯಲಾಗುತ್ತಿದೆ. ಜರ್ಮಪ್ಲಾಸಂಬ್ಯಾಂಕ್ತೋಟದಿಂದ ಆಯ್ಕೆ ಮಾಡಿದ ಹಿಪ್ಪುನೇರಳೆ ತಳಿಗಳನ್ನು ಮೌಲ್ಯಮಾಪನ ಮಾಡಿ ಹೊಸತಳಿಗಳನ್ನು ಅಭಿವೃದ್ಧಿಪಡಿಸಲಾಗಿದೆ ಹಿಪ್ಪುನೇರಳೆ ಜರ್ಮಪ್ಲಾಸಂಬ್ಯಾಂಕ್ತೋಟದಲ್ಲಿ ಒಟ್ಟು 300 ಹಿಪ್ಪುನೇರಳೆ ತಳಿಗಳನ್ನು ನಿರ್ವಹಣೆ ಮಾಡಲಾಗುತ್ತಿರುತ್ತದೆ.

## C. ಹಿಪ್ಪುನೇರಳೆ ರೋಗ ಮತ್ತು ಸೂಕ್ಷ್ಮಾಣು ಜೀವಿಶಾಸ್ತ್ರಶಾಖೆ:

ಹಿಪ್ಪುನೇರಳೆ ರೋಗ ಮತ್ತು ಸೂಕ್ಷ್ಮಾಣು ಜೀವಿಶಾಸ್ತ್ರ ಶಾಖೆಯಲ್ಲಿಒಟ್ಟು 06 ಸಂಶೋಧನೆ ಯೋಜನೆಗಳು, 01 ದೀರ್ಘಕಾಲದ ಸೇವಾ ಆಧಾರಿತ ಹಾಗೂ 01 ಅಂತರ ವಿಭಾಗದ ಸಂಶೋಧನೆ ಸೇರಿದಂತೆ 07 ಯೋಜನೆಗಳು ಅನುಷ್ಠಾನಗೊಳ್ಳುತ್ತಿದೆ. ಪುನ:ಶ್ಚೇತನ ಅನುಧಾನದ ಅಡಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಸಂಶೋಧನೆ ಮತ್ತು ರೇಷ್ಮೆ ಕೃಷಿ ತ್ಯಾಜ್ಯವನ್ನು ಕಳಿಸುವ ತ್ಯಾಜ್ಯವಿಭಜಕ (waste decomposer) ಎಂಬ ಸಂಶೋಧನೆಯೂ ಬಹುತೇಕ ಮುಗಿದಿರುತ್ತದೆ ಹಾಗೂ ಅವುಗಳ dataವನ್ನು evaluate ಮಾಡಲಾಗುತ್ತಿದೆ. ಹಿಪ್ಪುನೇರಳೆಗೆ ಮಣ್ಣಿನಿಂದ ಬರುವ ರೋಗಗಳಿಗೆ ಸಮಗ್ರ ಬೇಸಾಯ ಕ್ರಮಗಳ ಸಂಶೋಧನೆಯ ಪ್ರಗತಿಯಲ್ಲಿದೆ. ರೇಷ್ಮೆ ಇಲಾಖೆಯ ಬೆಳೆ ಸ್ಥಿರೀಕರಣ ನಿಧಿ ಪ್ರಾಧಿಕಾರಿ (PSFA) ಅನುದಾನದಲ್ಲಿ ಅನುಷ್ಠಾನಗೊಳ್ಳುತ್ತಿರುವ ಯೋಜನೆಯೂ ಸಹ ಪ್ರಗತಿಯಲ್ಲಿದೆ. ಅಂತರವಿಭಾಗದ ಸಂಶೋಧನೆಯಡಿಯಲ್ಲಿ ಹಿಪ್ಪುನೇರಳೆ ಎಲೆಗಳನ್ನು ಬಾಧಿಸುವ ರಸಹೀರುವ ಕೀಟಗಳನ್ನು ನಿರ್ವಹಣೆಗೆ ಜೈವಿಕನಿಯಂತ್ರಕದ ಸಂಶೋಧನೆಯೂ ಪ್ರಗತಿಯಲ್ಲಿದೆ. ಶಾಖೆಯಲ್ಲಿ ಜೈವಿಕ ಗೊಬ್ಬರ ಮತ್ತು ಜೈವಿಕನಿಯಂತ್ರಕಗಳಾಗಿ ಬಳಸುವ ಸೂಕ್ಷ್ಮಾಣು ಜೀವಿಗಳಾದ 05 ಬ್ಯಾಕ್ಟಿರಿಯಾಗಳನ್ನು ಕಾಲಕಾಲಕ್ಕೆ ಮೌಲ್ಯಮಾಪನ ಮತ್ತು ನಿರ್ವಹಣೆ ಮಾಡಲಾಗುತ್ತಿದೆ.

### 1. ರೇಷ್ಮೆಕೃಷಿ ವಿಭಾಗ:

ರೇಷ್ಮೆ ಕೃಷಿ ವಿಭಾಗದಲ್ಲಿ ರೇಷ್ಮೆ ಹುಳು ತಳಿ ಮತ್ತು ತಳಿ ಶಾಸ್ತ್ರ; ರೇಷ್ಮೆ ಬೆಳೆ ಅಭಿವೃದ್ಧಿ ಶಾಖೆ ಮತ್ತು ಕೀಟ ರೋಗ ಶಾಸ್ತ್ರ ಹಾಗೂ ಕೀಟ ನಿರ್ವಹಣೆ ಶಾಖೆಗಳನ್ನು ಒಳಗೊಂಡಿದೆ. ಇದಲ್ಲದೆ ಊಟಿ ಮತ್ತು ಬಿಳಿಗಿರಿರಂಗನ ಬೆಟ್ಟದಲ್ಲಿ ಪ್ರಾದೇಶಿಕ ಉಪಕೇಂದ್ರಗಳನ್ನು ನಿರ್ವಹಿಸಲಾಗುತ್ತಿದೆ. ಈ ವಿಭಾಗವು ಮುಖ್ಯವಾಗಿ ನೂತನ ರೇಷ್ಮೆ ಹುಳು ತಳಿಗಳನ್ನು ಜನಪ್ರಿಯಗೊಳಿಸುವಲ್ಲಿ ಹಾಗೂ ರೋಗಗಳ ನಿಯಂತ್ರಣ ಮಾಡುವಲ್ಲಿ ಕೆಲಸ ಮಾಡುತ್ತಿದೆ.
'ಬೆಂಗಳೂರು ಬೆಳ್ಳಿ' (ಮಿಶ್ರ ತಳಿ) ಹಾಗೂ 'ಆದಿತ್ಯ' (ಬೈವೋಲ್ಟೈಂÉನ್ ದ್ವಿಸಂಕರಣ) ತಳಿಗಳ ಪ್ರಚುರಪಡಿಸುವ ಜೊತೆಗೆ ರೇಷ್ಮೆ ಹುಳುಗಳ ಜನನದ್ರವ್ಯ ತಳಿಗಳ ವೈಜ್ಞಾನಿಕ ನಿರ್ವಹಣೆ, ನೂತನ ಹುಳುಸಾಕಾಣಿಕೆ ತಾಂತ್ರಿಕತೆಗಳ ಅಭಿವೃದ್ಧಿಪಡಿಸುವಿಕೆ; ಮತ್ತು ಶೈತ್ಯಾಗಾರ ನಿರ್ವಹಣೆಯನ್ನು ಕೈಗೊಳ್ಳಲಾಗುತ್ತಿದೆ. ಹೊಸ ತಳಿಗಳ ನೂಲು ಬಿಚ್ಚಾಣಿಕೆಯ ಕಾರ್ಯಕ್ಷಮತೆಯು ಎ. ಆರ್. ಎಂ. ಗಳಲ್ಲಿ ಉತ್ತೇಜನಕಾರಿಯಾಗಿದೆ. ಇದಲ್ಲದೆ ಈ ವಿಭಾಗದಲ್ಲಿ ಪುನಶ್ಚೇತನ ಕಾರ್ಯಕ್ರಮದಡಿಯಲ್ಲಿ ೧೨ ಸಂಶೋಧನಾ ಯೋಜನೆಗಳನ್ನು; ಆರ್.ಕೆ.ವಿ.ವೈ. ಅಡಿಯಲ್ಲಿ ಮೂರು ಯೋಜನೆಗಳನ್ನು ಹಾಗು ಪಿ.ಎಸ್.ಎಫ್.ಎ. ಅಡಿಯಲ್ಲಿ ಎರಡು ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಕೆ.ಎಸ್.-೧೦ ಎಂಬ ವಿಶಿಷ್ಟ ತಳಿಯ ಡಯಾಪಾಸ್ ಪ್ರತಿಬಂಧಕ ಅಂಶದ ಜೆನೆಟಿಕ್ ಗುಣಲಕ್ಷಣಗಳ ಅಧ್ಯಯನ ಕೈಗೊಳ್ಳಲಾಗಿದೆ.
ರೇಷ್ಮೆ ಬೆಳೆ ಅಭಿವೃದ್ಧಿ ಶಾಖೆಯಲ್ಲಿ ಶುದ್ಧ ಮೈಸೂರು ಹಾಗು ಐ.ಎಂ.ಹೆಚ್. ತಳಿಗಳ ಪಿಳ (ಮೂಲ ಜನನ ದ್ರವ್ಯ) ಹಂತದ ನಿರ್ವಹಣೆ; ನೂತನ ತಳಿಗಳ ಪೌಷ್ಠಿಕಾಂಶ ಸಾಮರ್ಥ್ಯದ ವಿಶ್ಲೇಷಣೆ; ಹುಳುಸಾಕಾಣಿಕೆಯಲ್ಲಿ ಮಾನವ ಸಂಪನ್ಮೂಲ ಹಾಗೂ ವೆಚ್ಚವನ್ನು ಕಡಿತಗೊಳಿಸಲು ಹೊಸ ಗ್ಯಾಡ್ಜೆಟ್ಸ್‌ಗಳನ್ನು ಅಭಿವೃದ್ಧಿಪಡಿಸಲಾಗಿದೆ.

**ಕೀಟ ರೋಗ ಶಾಸ್ತ್ರ ಮತ್ತು ಕೀಟ ನಿರ್ವಹಣೆ ಶಾಖೆಯಲ್ಲಿ** ಪಿ.ಎಸ್.ಎಫ್.ಎ ಅನುದಾನಿತ "ರೇಷ್ಮೆ ಹುಳುವಿನ ಮೇಲೆ ಕೀಟ ನಾಶಕಗಳ ಪರಿಣಾಮ" ಎಂಬ ಯೋಜನೆಯಡಿಯಲ್ಲಿ ೫ಳ ಕೀಟ ನಾಶಕಗಳು/ ಕಳೆನಾಶಕಗಳನ್ನು ಹಿಪ್ಪುನೇರಳೆ ತೋಟಗಳ ಮಣ್ಣಿನ ಮೂಲಕ, ಜೈವಿಕ ವಿಶ್ಲೇಷಣೆ ಮತ್ತು ಬೈಯೋ-ಆಸ್ಸೇ ವಿಧಾನದಿಂದ ಪರೀಕ್ಷಿಸಲಾಗಿದೆ. ರೇಷ್ಮೆ ಹುಳುಗಳ ಸಾವಿಗೆ ಕಾರಣವಾಗುವ ಹಾಗು ಹುಳುವಿನ ಜೀವಿತಾವಧಿಯನ್ನು ಮುಂದುವರೆಸುವ ಕೀಟನಾಶಕಗಳು/ ಕಳೆನಾಶಕಗಳನ್ನು ಗುರುತಿಸಲಾಗಿದೆ. ಕೀಟನಾಶಕಗಳ ಸಮಸ್ಯೆಯಿಂದ ಕರ್ನಾಟಕದ ವಿವಿಧ ವಲಯಗಳಲ್ಲಿಯ ರೈತರಲ್ಲಿ ರೇಷ್ಮೆ ಹುಳುಗಳು ಗೂಡು ಕಟ್ಟದಿರುವ ಸಮಸ್ಯೆಯನ್ನು ವೈಜ್ಞಾನಿಕವಾಗಿ ಅಭ್ಯಸಿಸಿ ತುರ್ತು ಪರಿಹಾರವನ್ನು ರೈತರಿಗೆ ಸೂಚಿಸಲಾಗಿದೆ. ಹಿಪ್ಪುನೇರಳೆ ಕೀಟಗಳ (ಥ್ರಿಪ್ಸ್ ಮತ್ತು ಮೈಟ್ಸ್) ಹೈಪರ್ ಪ್ಯಾರಾಸಿಟಾಯಿಡ್ಸ್‌ಗಳ ವೃದ್ಧಿಪಡಿಸುವಿಕೆ ಹಾಗೂ ಕೀಟಗಳ ನಿಯಂತ್ರಣಕ್ಕಾಗಿ ವಿವಿಧ ಕೀಟ ನಾಶಕಗಳನ್ನು ಪರೀಕ್ಷಿಸಲಾಗುತ್ತಿದೆ. ಕೀಟಗಳ ನಿಯಂತ್ರಣಕ್ಕಾಗಿ ರೈತರಿಗೆ ಈಗಾಗಲೆ ಸೂಕ್ತ ಶಿಫಾರಸುಗಳನ್ನು ನೀಡಲಾಗಿದೆ. ಊಜಿ ನೊಣದ ನಿಯಂತ್ರಣಕ್ಕಾಗಿ ೧೫ ಲಕ್ಷಕ್ಕೂ ಅಧಿಕ ಪ್ಯಾರಾಸಿಟಾಯಿಡ್ಸ್‌ಗಳನ್ನು (ನೆಸೋಲಿಕ್ಸ್ ಥೈಮಸ್) ವೃದ್ಧಿಪಡಿಸಿ ಗೂಡಿನ ಮಾರುಕಟ್ಟೆಗಳಲ್ಲಿ ಹಾಗು

ವಿವಿಧ ಹಳ್ಳಿಗಳಲ್ಲಿ ಬಿಡುಗಡೆಗೊಳಿಸಲಾಗಿದೆ. ಇದಲ್ಲದೆ "ನಂದಿವಿಶ್ವಾಸ್"ಎಂಬ ಹುಳುಸಾಕಾಣಿಕೆ ಮನೆಯ ಸಾಮಾನ್ಯ ಸೋಂಕು ನಿವಾರಕವನ್ನು ಬೃಹತ್ ಪ್ರಮಾಣದಲ್ಲಿ ಉತ್ಪಾದನೆ ಮತ್ತು ಮಾರಾಟಕ್ಕಾಗಿ ಮೆ// ನಂದಿ ಆಗ್ರೋವೆಟ್, ಬೆಂಗಳೂರು ಇವರಿಗೆ ಪರವಾನಿಗೆ ನೀಡಲಾಗಿದೆ. ಇದಲ್ಲದೆ ಕಾಲ-ಕಾಲಕ್ಕೆ ಕ್ಷೇತ್ರಮಟ್ಟದಿಂದ ರೈತರ ತಾಂತ್ರಿಕ ಸಮಸ್ಯೆಗಳಿಗೆ ಸೂಕ್ತ ಪರಿಹಾರಗಳನ್ನು ಒದಗಿಸಲಾಗುತ್ತಿದೆ.

### 3. ರೇಷ್ಮೆತಾಂತ್ರಿಕವಿಭಾಗ:

ರೇಷ್ಮೆ ತಾಂತ್ರಿಕ ವಿಭಾಗವು ರೇಷ್ಮೆನೂಲು ಬಿಚ್ಚಾಣಿಕೆ ಮತ್ತು ವಸ್ತ್ರ ತಯಾರಿಕಾ ಶಾಖೆ ಹಾಗೂ ರೇಷ್ಮೆ ಸಂಸ್ಕರಣೆ ಮತ್ತು ಉಪಉತ್ಪನ್ನಗಳ ಬಳಕೆಯ ಶಾಖೆಗಳನ್ನುಒಳಗೊಂಡಿದ್ದು, ಮೂರು ಜನ ವಿಜ್ಞಾನಿಗಳು ರೇಷ್ಮೆಗೂಡಿನ ನಂತರ ಚಟುವಟಿಕೆಗಳ ಹಾಗು ಕ್ಷೇತ್ರದ ವಿವಿಧ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾರೆ. ರೇಷ್ಮೆ ನೂಲು ಬಿಚ್ಚಾಣಿಕೆ ಮತ್ತು ವಸ್ತ್ರ ತಯಾರಿಕಾ ಶಾಖೆಯಲ್ಲಿ ದ್ವಿತಳಿ ಗೂಡಿನ ಗುಣಮಟ್ಟದ ಪರೀಕ್ಷೆಯ ಪ್ರೋಟೋಕಾಲ್‌ನ್ನು ಅಭಿವೃದ್ಧಿಪಡಿಸಲಾಗಿದೆ. ವಿವಿಧ ಋತುಮಾನಗಳಲ್ಲಿ 180 ಕ್ಕೂ ಹೆಚ್ಚು ದ್ವಿತಳಿಗೂಡಿನ ಮಾದರಿಗಳ ಗೂಡಿನ ಗುಣಮಟ್ಟ ಪರೀಕ್ಷೆ ಮತ್ತು ನಿಖರವಾದ ರೇಷ್ಮೆಇಳುವರಿಯನ್ನು ನಿರ್ಧರಿಸಲು ರೀಲರ್ ಗಳ ಘಟಕಗಳಲ್ಲಿ ರೇಷ್ಮೆ ಇಳುವರಿಯನ್ನು ಪರೀಕ್ಷಿಸಲಾಯಿತು. ದ್ವಿತಳಿ ರೇಷ್ಮೆಗೂಡಿನ ಗುಣಮಟ್ಟದ ಪ್ರೋಟೋಕಾಲ್ ಅಭಿವೃದ್ಧಿಗಾಗಿ ಕ್ಷೇತ್ರಮಟ್ಟದಲ್ಲಿನ ಫಲಿತಾಂಶವನ್ನು ವಿಶ್ಲೇಷಿಸಲಾಗಿದೆ. ಮಾನವ ಸಂಪನ್ಮೂಲದ ತರಬೇತಿ ಹಾಗು ಗೂಡಿನ ಗುಣಮಟ್ಟದ ಪರೀಕ್ಷೆಯ ಸಂಬಂಧ ಕೌಶಲ್ಯ ಮತ್ತು ದೈನಂದಿನ ಅಗತ್ಯಗಳಿಗೆ ಮೇಲ್ವಿಚಾರಣೆಯನ್ನು ಗೂಡಿನ ಪರೀಕ್ಷಾ ಕೇಂದ್ರಗಳಾದ ಕನಕಪುರ, ಚಿಂತಾಮಣಿ, ಶಿಡ್ಲಘಟ್ಟ ಮತ್ತು ಕೋಲಾರದ ಪ್ರಯೋಗಾಲಯಗಳಲ್ಲಿ ಕೈಗೊಳ್ಳಲಾಗಿದೆ. ವಿಭಾಗದ ವಿಜ್ಞಾನಿಗಳು ಕ್ಷೇತ್ರ ಮಟ್ಟದಲ್ಲಿ ಬೇಕಾದಂತಹ ಪರಿಸರ ಸ್ನೇಹಿ ತಂತ್ರಜ್ಞಾನಗಳ ಅಭಿವೃದ್ಧಿ ಪಡಿಸಲು ಶ್ರಮಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ವಿಭಾಗವು ದಕ್ಷತಾಶಾಸ್ತ್ರದ (Ergonomic modes) ವಿನ್ಯಾಸವನ್ನು ಆಧಾರಿಸಿ ಮಾರ್ಪಡಿಸಿದ ಇಟಲಿಯಾನ್ ಮಾದರಿಯ ರೀಲಿಂದ ಯಂತ್ರವನ್ನುಅಭಿವೃದ್ಧಿಪಡಿಸಲಾಗಿದೆ. ಸದರಿ ಯಂತ್ರದಲ್ಲಿ ರೀಲಿಂಗ್ ಚಟುವಟಿಕೆಗಳನ್ನು ಕೈಗೊಳ್ಳಲು ಆರಾಮದಾಯಕವಾಗಿ ಕುಳಿತುಕೊಂಡು ನೂಲು ಬಿಚ್ಚಾಣಿಕೆ ಮಾಡಲು ವ್ಯವಸ್ಥೆ ಮಾಡಲಾಗಿದ್ದು, ಸದರಿಯಂತ್ರದಿಂದ ಗುಣಮಟ್ಟದ ರೇಷ್ಮೆಯನ್ನು ಉತ್ಪಾದಿಸಲು ಸಹಕಾರಿಯಾಗಿದೆ. ಸದರಿಯಂತ್ರದಲ್ಲಿ ಜೆಟ್‌ಬೋ ಅಳವಡಿಸಲಾಗಿ ಸುಲಭವಾಗಿ ಗೂಡಿನ ಎಳೆಗಳನ್ನು ಸೇರಿಸಲು ಸಹಕಾರಿಯಾಗಿದೆ ಹಾಗು ಸುಲಭವಾಗಿ ತುಂಡಾದದಾರವನ್ನು ಮರುಪೋಣಿಸಲು ಸೀಳುಲೋಹದ ಬಟನ್ ಅಭಿವೃದ್ಧಿ ಪಡಿಸಲಾಗಿದೆ.

### ರೇಷ್ಮೆ ಸಂಸ್ಕರಣೆ ಮತ್ತು ಉಪಉತ್ಪನ್ನಗಳ ಬಳಕೆಯ ಶಾಖೆ:

ರೇಷ್ಮೆ ಸಂಸ್ಕರಣೆ ಮತ್ತು ಉಪಉತ್ಪನ್ನಗಳ ಬಳಕೆಯಶಾಖೆಯಲ್ಲಿ ಮುಖ್ಯವಾಗಿ ರೇಷ್ಮೆ ಕೃಷಿ ಉದ್ದಿಮೆದಾರರ ಆದಾಯವನ್ನು ಹೆಚ್ಚಿಸಲು ಉಪಉತ್ಪನ್ನಗಳನ್ನು ಅಭಿವೃದ್ಧಿಪಡಿಸುವ ಕಾರ್ಯನಿರ್ವಹಿಸಿದ್ದು ಸಿರಿಸಿನ್ ಬಳಸಿ 11 ಕ್ಕೂ ಹೆಚ್ಚು ಸೌಂಧರ್ಯವರ್ಧಕಗಳನ್ನು ಅಭಿವೃದ್ಧಿಪಡಿಸಲಾಗಿದೆ. ಈ ಅವಧಿಯಲ್ಲಿ 2 ಸೌಂದರ್ಯವರ್ಧಕಗಳನ್ನು ಚರ್ಮದ ಸುರಕ್ಷಾತ ಮೌಲ್ಯಮಾಪನದ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಸಂಸ್ಥೆಯು ಶ್ರೀಶ್ರೀಶ್ರೀ ಆರ್ಯುವೇದ ರವರ ಸಹಯೋಗದೊಂದಿಗೆ ತಯಾರಿಸಿದಂತಹ "ತುದಾಸವಾ ಹಾಗು ತುದಾಸೀರಪ್" ಆರ್ಯುವೇದ ಸೂತ್ರೀಕರಣಗಳನ್ನು ಪರೀಕ್ಷೆ ಕೈಗೊಳ್ಳಲು ಕ್ರಮ ಜರುಗಿಸಲಾಗಿದೆ. ಸದರಿ ಪರೀಕ್ಷಾ ವರದಿ ಆಧಾರಿಸಿ ಮಾನವನ ಮೇಲೆ ಪರೀಕ್ಷೆ ಕೈಗೊಳ್ಳಲು ಆಯುಷ್ಮಂತ್ರಾಲಯದ ಅಧಿಕಾರಿಗಳ ಮಾರ್ಗದರ್ಶನದಂತೆ ಮುಂದುವರಿಸಲಾಗಿದೆ. ಸದರಿ ಉತ್ಪನ್ನಗಳು ಮಧುಮೇಹ ಹಾಗು ಅಧಿಕ ರಕ್ತದೊತ್ತಡ ತಡೆಗಟ್ಟಲು ಸಹಕಾರಿಯಾಗುವ ಬಗ್ಗೆ ಆಯುಷ್ ಗ್ರಂಥಗಳಲ್ಲಿ ವ್ಯಾಕ್ಯಾನಿಸಲಾಗಿದೆ. ಸಂಸ್ಕರಣಾ ಶಾಖೆಯಲ್ಲಿ ಗೂಡಿನ ತ್ಯಾಜ್ಯದಿಂದ ಮಾವಟ ಮತ್ತು ಕ್ವಿಲ್ಟ್ ಗಳನ್ನು ತಯಾರಿಕೆಯ ತಾಂತ್ರಿಕತೆ ಅಭಿವೃದ್ಧಿಪಡಿಸಲಾಗಿದ್ದು, ಸದರಿ ಶಾಖೆಯು ಸೆಂಟರ್ ಪಾರ್ ಇನೋವೇಷನ್ ಇನ್‌ಕ್ಯೂಬೇಷನ್ ಅಂಡ್ ರಸರ್ಚ್ ಸೆಂಟರ್ (ಸಿ.ಐ.ಆರ್.ಸಿ) ಸಹಯೋಗದೊಂದಿಗೆ ಉಪಯೋಜನೆಗಳನ್ನು ಹಮ್ಮಿಕೊಂಡಿದ್ದು ರೇಷ್ಮೆ ಕೃಷಿ ತ್ಯಾಜ್ಯವನ್ನು ಬಳಸಿ ಈ ಕೆಳಕಂಡ ಉಪ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲಾಗಿದೆ.

1. ರೇಷ್ಮೆ ಕಡ್ಡಿಗಳಿಂದ ಜೈವಿಕ ಸಂಯೋಜಿತ ಬೋರ್ಡ್‌ಗಳು

2. ಸಿರಿಸಿನ್ ಮತ್ತು ಪಿವಿಎ ಕಾಂಪೋಸಿಟ್ ಬಳಸಿ ಸ್ಕ್ಯಾಫೋಲ್ಡ್‌ಗಳ ತಯಾರಿಕೆಯ ತಂತ್ರಜ್ಞಾನವನ್ನು ಅಭಿವೃದ್ಧಿ ಪಡಿಸಲಾಗಿದ್ದು, ಸದರಿ ಸ್ಕ್ಯಾಫೋಲ್ಡ್ ಗಳ ನ್ನು ವೈದ್ಯಕೀಯ ಉದ್ಯಮದಲ್ಲಿ ಬಳಸಲಾಗಬಹುದು.
3. ಪ್ಯೂಪಾ ಎಣ್ಣೆಯಿಂದ ಜೈವಿಕ ಡೀಸೆಲ್.
4. ಪ್ಯೂಪಾಕೇಕ್ ತ್ಯಾಜ್ಯದಿಂದ ಮೀನಿನ ಆಹಾರ ಮತ್ತು ಪಶುಗಳ ಆಹಾರ ತಯಾರಿಕೆ.

## 2. ವಿಸ್ತರಣೆ ಮತ್ತು ತರಬೇತಿ ವಿಭಾಗ

ಸಂಸ್ಥೆಯು RCRCಗಳ (ನೋಂದಾಯಿತ ಚಾಕಿ ಸಾಕಣೆ ಕೇಂದ್ರಗಳು) ಮಾಲೀಕರಿಗೆ "ಚಾಕಿ ಪಾಲನೆ" ಕುರಿತು ತರಬೇತಿ ಕಾರ್ಯಕ್ರಮವನ್ನು ಜಾರಿಗೊಳಿಸಿತು. ಕರಕುಶಲ ತರಬೇತಿ ಕಾರ್ಯಕ್ರಮ: ಮಹಿಳಾ ಕರಕುಶಲ ತರಬೇತಿ ಕಾರ್ಯಕ್ರಮದಲ್ಲಿ ರೇಷ್ಮೆಕೃಷಿಯಲ್ಲಿ ಮೌಲ್ಯವರ್ಧನೆಗಾಗಿ 35 ಮಹಿಳೆಯರಿಗೆ ತರಬೇತಿ ನೀಡಲಾಯಿತು. ಸಂದರ್ಶಕರು ಮತ್ತು ರೈತರಿಗೆ ಅಗತ್ಯವಿದ್ದಾಗ ತಾಂತ್ರಿಕ ಮಾಹಿತಿಯನ್ನು ನೀಡಲಾಗುತ್ತದೆ. ಇದಲ್ಲದೆ, ವಿಭಾಗದಿಂದ ಸ್ಥಾಪಿತವಾದ 'ರೇಷ್ಮೆ ಕೃಷಿ ವಸ್ತುಸಂಗ್ರಹಾಲಯ'ವನ್ನು ನಿರ್ವಹಿಸಲಾಗುತ್ತಿದೆ.

****

# ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ

## I. ಕಂಪನಿಯ ಸಂಕ್ಷಿಪ್ತ ಇತಿಹಾಸ ಮತ್ತು ಹಿನ್ನೆಲೆ:

**ಮುಖ್ಯ ವ್ಯವಹಾರಗಳು:** ವಿಶ್ವವಿಖ್ಯಾತ ಪಾರಂಪರಿಕ 'ಮೈಸೂರ್ ಸಿಲ್ಕ್' ಸೀರೆಗಳು ಮತ್ತು ಇನ್ನಿತರ ರೇಷ್ಮೆ ಉತ್ಪನ್ನಗಳನ್ನು ಉತ್ಪಾದಿಸಿ ಮಾರಾಟ ಮಾಡುವುದು.

ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮವನ್ನು (ಕೆಎಸ್‌ಐಸಿ) 1980 ರಲ್ಲಿ ಪ್ರಾರಂಭಿಸಲಾಯಿತು.ಇದರ ಕೇಂದ್ರ ಕಛೇರಿಯು 3 ಮತ್ತು 4ನೇ ಅಂತಸ್ತು, ಜನೋಪಯೋಗಿ ಕಟ್ಟಡ, ಎಂ.ಜಿ.ರಸ್ತೆ, ಬೆಂಗಳೂರು ಇಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ.ರೇಷ್ಮೆ ನೇಯ್ಗೆ ಕಾರ್ಖಾನೆಯು ಮೈಸೂರಿನಲ್ಲಿ ಇದು ಮೈಸೂರಿನ ಹೃದಯ ಭಾಗವಾದ ಮಾನಂದವಾಡಿ ರಸ್ತೆಯಲ್ಲಿರುತ್ತದೆ. ಈ ಕಾರ್ಖಾನೆಯು ರೈಲ್ವೆ ನಿಲ್ದಾಣದಿಂದ 2.5 ಕಿ.ಮೀ. ದೂರದಲ್ಲಿರುತ್ತದೆ. ರೇಷ್ಮೆ ನೂಲು ತೆಗೆಯುವ ಘಟಕವು ತಿ.ನರಸೀಪುರದಲ್ಲಿದ್ದು, ಈ ಕಾರ್ಖಾನೆಯು ಮೈಸೂರು ನಗರದಿಂದ 30 ಕಿ.ಮೀ. ದೂರದಲ್ಲಿರುತ್ತದೆ. ರೇಷ್ಮೆ ನೇಯ್ಗೆ ಘಟಕವು ಜೂಟು ರೇಷ್ಮೆ ಗಿರಣಿ, ಚನ್ನಪಟ್ಟಣದ ಆವರಣದಲ್ಲಿದ್ದು, ಈ ಕಾರ್ಖಾನೆಯು ಬೆಂಗಳೂರು ನಗರದಿಂದ 60 ಕಿ.ಮೀ. ದೂರದಲ್ಲಿರುತ್ತದೆ. ಪ್ರಸ್ತುತ ಕೇಂದ್ರ ಕಛೇರಿ, ಬೆಂಗಳೂರಿನ ಮಾರಾಟ ಮಳಿಗೆಗಳು, ಚನ್ನಪಟ್ಟಣ, ಹೈದ್ರಾಬಾದ್, ಚೆನ್ನೈ ಹಾಗೂ ದಾವಣಗೆರೆ ಮಾರಾಟ ಮಳಿಗೆಗಳಲ್ಲಿ ಒಟ್ಟು ಖಾಯಂ ಹಾಗೂ ಹೊರಗುತ್ತಿಗೆ ನೌಕರರು 151 ರಷ್ಟಿರುತ್ತಾರೆ. ರೇಷ್ಮೆ ನೇಯ್ಗೆ ಕಾರ್ಖಾನೆ–ಮೈಸೂರು ಇಲ್ಲಿ ಒಟ್ಟು 573 ಖಾಯಂ ಹಾಗೂ ಹೊರಗುತ್ತಿಗೆ ನೌಕರರು ಇದ್ದು, ರೇಷ್ಮೆ ನೂಲು ತೆಗೆಯುವ ಘಟಕ–ತಿ.ನರಸೀಪುರ ಇಲ್ಲಿ ಒಟ್ಟು ಖಾಯಂ ಹಾಗೂ ಹೊರಗುತ್ತಿಗೆ ನೌಕರರು 174 ರಷ್ಟಿರುತ್ತಾರೆ. ರೇಷ್ಮೆ ನೇಯ್ಗೆ ಘಟಕ–ಚನ್ನಪಟ್ಟಣ ಇಲ್ಲಿ ಒಟ್ಟು ಖಾಯಂ ಹಾಗೂ ಹೊರಗುತ್ತಿಗೆ ನೌಕರರು 45 ರಷ್ಟಿರುತ್ತಾರೆ.

ರೇಷ್ಮೆ ದಾರವು ಬಹು ಮುಖ್ಯ ಕಚ್ಚಾ ವಸ್ತುವಾಗಿದ್ದು, ಇದರಿಂದ ರೇಷ್ಮೆ ಬಟ್ಟೆಯನ್ನು ತಯಾರಿಸಲಾಗುತ್ತಿದೆ.ತಿ.ನರಸೀಪುರ ಘಟಕದಲ್ಲಿ ರೇಷ್ಮೆ ಗೂಡಿನಿಂದ ರೇಷ್ಮೆ ದಾರವನ್ನು ಉತ್ಪಾದನೆ ಮಾಡಲಾಗುತ್ತದೆ. ತಿ.ನರಸೀಪುರ ಘಟಕದಲ್ಲಿ ಉತ್ಪಾದನೆ ಮಾಡಲಾಗುವ ರೇಷ್ಮೆ ದಾರದ ಜೊತೆಗೆ ಅಲ್ಪ ಪ್ರಮಾಣದ ರೇಷ್ಮೆ ದಾರವನ್ನು ಮಾರುಕಟ್ಟೆಯಲ್ಲಿ ಖರೀದಿಸಿ ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರಿನಲ್ಲಿ ರೇಷ್ಮೆ ಬಟ್ಟೆಯನ್ನು ತಯಾರು ಮಾಡಲು ಉಪಯೋಗಿಸಲಾಗುತ್ತದೆ.

ನಿಗಮದ ಕಾರ್ಖಾನೆಗಳಲ್ಲಿ ಉತ್ಪಾದಿಸುವ ರೇಷ್ಮೆ ಬಟ್ಟೆಗಳನ್ನು ತನ್ನದೇ ಆದ ಮಾರಾಟ ಮಳಿಗೆಗಳು, ರಾಜ್ಯ ಹಾಗೂ ಹೊರ ರಾಜ್ಯಗಳಲ್ಲಿ ವಸ್ತು ಪ್ರದರ್ಶನಗಳ ಮುಖಾಂತರ ಹಾಗೂ ಅಂತರ್ಜಾಲದಲ್ಲಿ ಆನ್‌ಲೈನ್ ಮೂಲಕ ಮಾರಾಟ ಮಾಡಲಾಗುತ್ತದೆ.

ಕೇಂದ್ರ ಕಛೇರಿಯಲ್ಲಿ ಸಿಬ್ಬಂದಿ, ಮಾರುಕಟ್ಟೆ, ಹಣಕಾಸು ಮತ್ತು ಲೆಕ್ಕ, ಸಂಗ್ರಹಣೆ ಹಾಗೂ ಕಂಪನಿ ಕಾರ್ಯದರ್ಶಿ ಎಂಬ 5 ವಿಭಾಗಗಳಿರುತ್ತವೆ. ಲೆಕ್ಕಪತ್ರ ಪರಿಶೀಲನೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಚಾರ್ಟರ್ಡ್ ಅಕೌಂಟೆಂಟ್‌ರವರ ಮುಖಾಂತರ ನಡೆಸಲಾಗುತ್ತಿದೆ.

ಕೆಎಸ್‌ಐಸಿಯು ಉನ್ನತ ಗುಣಮಟ್ಟ, ಪರಂಪರೆ ಹಾಗೂ ಗ್ರಾಹಕರ ಬೇಡಿಕೆಗನುಗುಣವಾಗಿ ಉತ್ತಮ ಗುಣಮಟ್ಟದ ಬಟ್ಟೆ ಉತ್ಪಾದಿಸಲು ನಿಗದಿತ ಮಾನದಂಡ, ಉತ್ಪನ್ನದ ಲಕ್ಷಣಗಳು, ಉತ್ಪನ್ನದ ನಿರ್ದಿಷ್ಟತೆ, ಕಾರ್ಯವಿಧಾನಗಳು ಹಾಗೂ ದಿನನಿತ್ಯದ ವ್ಯಾವಹಾರಿಕ ಪದ್ಧತಿಗಳನ್ನು ಅಳವಡಿಸಿಕೊಂಡಿರುತ್ತದೆ.

**ಉತ್ಪನ್ನಗಳ ವಿವರಗಳು:**

ಈ ಕೆಳಕಂಡ ಶುದ್ಧ ರೇಷ್ಮೆ ವಸ್ತ್ರಗಳನ್ನು ರೇಷ್ಮೆ ನೇಯ್ಗೆ ಕಾರ್ಖಾನೆ–ಮೈಸೂರು ಇಲ್ಲಿ ತಯಾರಿಸಲಾಗುತ್ತಿದೆ.

1. ಜರಿ ಕ್ರೇಪ್ ಸೀರೆಗಳು
2. ಜರಿ ಕ್ರೇಪ್ ಮುದ್ರಿತ ಸೀರೆಗಳು
3. ಕ್ರೇಪ್ ಪ್ರಿಂಟೆಡ್ ಸೀರೆಗಳು
4. ಸಿದ್ಧ ಉಡುಪು ವಸ್ತುಗಳು
5. ಸ್ಕಾರ್ಫ್ ಮತ್ತು ಟೈಗಳು

ಸಂಸ್ಥೆಯು ಕ್ಯೂಎಂಎಸ್ 9001–2015, ಇಎಂಎಸ್ 14001–2015 ಮತ್ತು ಒಎಸ್‌ಹೆಚ್‌ಎಎಸ್ 18001–2007 ಸಂಯೋಜಿತ ಸಮಗ್ರ ನಿರ್ವಹಣಾ ವ್ಯವಸ್ಥೆಯ ಧೃಢೀಕರಣ ಪತ್ರಗಳನ್ನು ಮೆ॥ ಟಿ.ಯೂ.ವಿ.ರೇಲ್ಯಾಂಡ್ ರವರಿಂದ ಪಡೆದಿರುತ್ತದೆ.

## II. 2022–23 ನೇ ಸಾಲಿನ ಕಾರ್ಯ ನಿರ್ವಹಣೆ 31.03.2023 ರಲ್ಲಿ ಇದ್ದಂತೆ (ತಾತ್ಕಾಲಿಕ):

ರೂ. ಲಕ್ಷಗಳಲ್ಲಿ

| ಕ್ರಮ ಸಂಖ್ಯೆ | ಕಾರ್ಯ ನಿರ್ವಹಣೆ | 2022–23 | 2021–22 |
|---|---|---|---|
| ಅ. | ಬಟ್ಟೆಗಳ ಉತ್ಪಾದನೆ (ಮೀಟರುಗಳಲ್ಲಿ) | 5,41,823.55 | 4,23,636 |
| ಆ. | ಉತ್ಪಾದನಾ ಮೌಲ್ಯ | 21,078 | 16,481 |
| ಇ. | ಮಾರಾಟ ಮೌಲ್ಯ | 20,507 | 16,516 |
| ಈ. | ಇತರೆ ಆದಾಯ | 900 | 714 |
| ಉ. | ವಸ್ತ್ರಗಳ ಮಾರಾಟ | 20,345 | 16,375 |
| ಊ. | ರೇಷ್ಮೆ ದಾರ/ಉಪ ಉತ್ಪನ್ನಗಳ ಮಾರಾಟ | 162 | 141 |
| ಋ. | ತೆರಿಗೆಯ ಮುಂಚಿನ ವರ್ಷದ ಲಾಭ (ತಾತ್ಕಾಲಿಕ) | 4,767.35 | 4,451.33 |
| ಎ. | ತೆರಿಗೆಯ ನಂತರ ವರ್ಷದ ಲಾಭ (ತಾತ್ಕಾಲಿಕ) | 3,467.35 | 3,164.49 |

ನಿಮ್ಮ ನಿರ್ದೇಶಕ ಮಂಡಲಿಯು ವರದಿಯ ವರ್ಷದಲ್ಲಿನ ಗಣನೀಯ ಅಭಿವೃದ್ಧಿಗೆ ಕಾರಣವಾಗಿರುವ ಅಂಶಗಳನ್ನು ತಿಳಿಸಲು ಹರ್ಷಿಸುತ್ತದೆ. 2022–23ನೇ ಸಾಲಿನಲ್ಲಿ 31.03.2023 ರಲ್ಲಿ ಇದ್ದಂತೆ ಲಾಭ ಗಳಿಸಲು ಕಾರಣವಾದ ಪ್ರಮುಖ ಅಂಶಗಳು ಈ ಕೆಳಕಂಡಂತೆ ಇವೆ:

- ಆಧುನೀಕರಣ ಮತ್ತು ನವೀಕರಣ.
- ತಂತ್ರಜ್ಞಾನದ ಖರ್ಚಿನ ಮೇಲೆ ಮತ್ತು ಮಾರಾಟ ವೆಚ್ಚಗಳ ಮೇಲಿನ ಉತ್ತಮ ನಿಯಂತ್ರಣ.
- ಮಾರಾಟ ಮೌಲ್ಯದಲ್ಲಿನ ಹೆಚ್ಚಳ;
- ಮಾರಾಟ ಮಳಿಗೆಗಳಲ್ಲಿನ ಮಾರಾಟ ಹೆಚ್ಚಿಸಲು ಸಾಂಸ್ಥಿಕ ಮಾರಾಟವನ್ನು ವ್ಯವಸ್ಥೆಗೊಳಿಸಲಾಯಿತು;
- ಸಂಪನ್ಮೂಲ ಮತ್ತು ಕಾರ್ಯಾಚರಣೆ ಬಂಡವಾಳ ಪರಿಣಾಮಕಾರಿ ನಿರ್ವಹಣೆ;
- ಎಲೆಕ್ಟ್ರಾನಿಕ್ ಜಕಾರ್ಡ್ ಹೊಸ ಯಂತ್ರಗಳ ಅಳವಡಿಕೆಯಿಂದಾಗಿ ಹೊಸ ವಿನ್ಯಾಸದ ಉತ್ಪನ್ನ ಮಾದರಿಗಳನ್ನು ಮಾರುಕಟ್ಟೆಗೆ ಪರಿಚಯಿಸಿದ್ದುದರಿಂದ;
- ಕೆ.ಎಸ್.ಐ.ಸಿ.ಯು ರೇಷ್ಮೆ ಕೃಷಿ ಇಲಾಖೆಯು ಆ ದಿನದಲ್ಲಿದ್ದ ಸರ್ಕಾರಿ ರೇಷ್ಮೆ ಉತ್ಪಾದನಾ ಘಟಕಗಳನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ವರ್ಗಾವಣೆಗೊಂಡ ನೌಕರರ ನಿವೃತ್ತಿ ವೇತನ ಕೊಡುವಾಗ ಅವರು ಸ್ವಯಂ ನಿವೃತ್ತಿ ಹೊಂದಿದಾಗ ಕೆ.ಎಸ್.ಐ.ಸಿ.ಯು ಅವರಿಗೆ ನೀಡಿದ್ದ ಸ್ವಯಂ ನಿವೃತ್ತಿ ಹಣವನ್ನು ಅವರ ನಿವೃತ್ತಿ ಹಣದಿಂದೆ ಕಡಿತಗೊಳಿಸಿ ಕೆ.ಎಸ್.ಐ.ಸಿ.ಗೆ ಹಿಂತಿರುಗಿದ ಬಾಬ್ತುನಿಂದ ಬಂದ ಆದಾಯ; ಉತ್ಪಾದನಾ ಘಟಕಗಳಲ್ಲಿ ಗಣಕೀಕರಣದ ಪರಿಚಯ.

### III. ಲಾಭಾಂಶ:

ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಷೇರುದಾರರ ಅನುಮೋದನೆಗೆ ಒಳಪಟ್ಟಂತಿದ್ದು, 2022–23ನೇ ಆರ್ಥಿಕ ವರ್ಷ ಮುಗಿದ ನಂತರ ಮಂಡಳಿಯು ಕನಿಷ್ಠ ಲಾಭಾಂಶವನ್ನು ಶಿಫಾರಸ್ಸು ಮಾಡುತ್ತದೆ. ಅದೇ ವಿಷಯವನ್ನು ವಾರ್ಷಿಕ ಮಹಾ ಸಭೆಗೆ ಅಂತಿಮ ಲಾಭಾಂಶವನ್ನು ಘೋಷಿಸಲು ಮಂಡಿಸಲಾಗುತ್ತದೆ.

### IV. ಕಾರ್ಯಕ್ಷಮತೆ ಬಜೆಟ್:

2019–20ರ ವರ್ಷದಲ್ಲಿ ಕಂಪನಿಯು ಚನ್ನಪಟ್ಟಣದಲ್ಲಿ ಕಾರ್ಖಾನೆಯ ಆಧುನೀಕರಣಕ್ಕೆ ರೂ.3,00,00,000/– ಅನುದಾನವನ್ನು ಪಡೆದಿದೆ ಮತ್ತು ಕೆಲಸ ಪ್ರಗತಿಯಲ್ಲಿದೆ. 2022–23 ನೇ ಸಾಲಿನ ಅವಧಿಯಲ್ಲಿ 31.03.2023 ರಂತೆ ಕಂಪನಿಯು ಯಾವುದೇ ಅನುದಾನವನ್ನು ಪಡೆದಿಲ್ಲ.

# ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

1 ಮತ್ತು 2 ನೇ ಮಹಡಿ, ರೇಷ್ಮೆ ಭವನ, ವಾಟಾಳ್ ನಾಗರಾಜ್ ರಸ್ತೆ, ಓಕಳೀಪುರಂ, ಬೆಂಗಳೂರು – 560021.

---

## ಸ್ಥಾಪನೆ:

ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ನಿಯಮಿತವು ಕರ್ನಾಟಕ ಸರ್ಕಾರದ ಒಂದು ಉದ್ಯಮವಾಗಿದ್ದು, ರೇಷ್ಮೆ ವಿನಿಮಯ ಕೇಂದ್ರದ ಅನುಬಂಧ ಸಂಸ್ಥೆಯಾಗಿ 1979 ರಲ್ಲಿ ಸ್ಥಾಪನೆಗೊಂಡಿತು.

## ಉದ್ದೇಶ:

- **ರೇಷ್ಮೆ ಬೆಲೆಗಳಲ್ಲಿ ಸ್ಥಿರತೆ ಕಾಯ್ದುಕೊಳ್ಳುವುದು.**
- **ಮಾರುಕಟ್ಟೆ ಮಧ್ಯಪ್ರವೇಶ ಮಾಡಿ ರೈತರ ಮತ್ತು ರೀಲರುಗಳ ಹಿತ ಕಾಪಾಡುವುದು.**
- **ನೇಕಾರರಿಗೆ ಉತ್ತಮ ಗುಣಮಟ್ಟದ ರೇಷ್ಮೆನೂಲನ್ನು ನಿರಂತರವಾಗಿ ನ್ಯಾಯಯುತ ಬೆಲೆಗಳಲ್ಲಿ ಸರಬರಾಜು ಮಾಡುವುದು.**

## ಕಾರ್ಯಾಚರಣೆ:

ರಾಜ್ಯದ ಪ್ರಮುಖ ರೇಷ್ಮೆ ಉತ್ಪಾದನಾ ಕೇಂದ್ರಗಳಲ್ಲಿ ರೇಷ್ಮೆ ವಿನಿಮಯ ಕೇಂದ್ರದಲ್ಲಿ ಭಾಗವಹಿಸಿ ಖರೀದಿಸಲಾಗುವುದು ಮತ್ತು ಖರೀದಿಸಿದ ರೇಷ್ಮೆಯ ಒಂದು ಪಾಲನ್ನು ಮಜೂರಿ ಆಧಾರದ ಮೇಲೆ ಹುರಿ ಮಾಡಿಸಿ, ಕಚ್ಚಾ ಮತ್ತು ಹುರಿ ರೇಷ್ಮೆಯನ್ನು ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಪ್ರಮುಖ ನೇಯ್ಗೆ ಕೇಂದ್ರಗಳಲ್ಲಿ ನಗದು ಮತ್ತು ಸಾಲದ ರೂಪದಲ್ಲಿ ಮಾರಾಟ ಮಾಡಲಾಗುತ್ತದೆ. ಮಂಡಳಿಯು ಸಂಪೂರ್ಣ ವಾಣಿಜ್ಯ ಸಂಸ್ಥೆಯಾಗಿರದೆ, ಮಾರುಕಟ್ಟೆ ಮಧ್ಯಪ್ರವೇಶ ಮಾಡುವ ಸಂಸ್ಥೆಯಾದುದರಿಂದ ಲಾಭ / ನಷ್ಟ ಪ್ರಮುಖವಾಗಿರುವುದಿಲ್ಲ. ಇದೊಂದು ಸಾಮಾಜಿಕ ಬದ್ಧತೆ ಹೊತ್ತ ಸಂಸ್ಥೆ ಎಂದು ಪರಿಗಣಿಸಬೇಕಾಗಿರುತ್ತದೆ. ರೇಷ್ಮೆ ಮಾರಾಟ ಮಂಡಳಿಯು ರೇಷ್ಮೆ ನೂಲಿನ ಬೆಲೆ ಸ್ಥಿರೀಕರಣಕ್ಕಾಗಿ ಕರ್ನಾಟಕ ರಾಜ್ಯದಲ್ಲಿ ಉದ್ಯಮದ ಸ್ಥಿರತೆಗಾಗಿ ಸ್ಥಾಪಿಸಲ್ಪಟ್ಟಿರುವ ಏಕೈಕ ಸಂಸ್ಥೆಯಾಗಿರುತ್ತದೆ.

## ಮಂಡಳಿಗೆ ಅನ್ವಯಿಸುವ ಮುಖ್ಯವಾದ ಕಾಯ್ದೆಗಳು:

(ಅ) ಕಂಪೆನಿ ಕಾಯ್ದೆ 1956 ಮತ್ತು 2013.

## ಪ್ರಸ್ತುತ ನಿರ್ದೇಶಕರ ಮಂಡಳಿ:

1) ಅಧ್ಯಕ್ಷರು.

2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ.

3) ರೇಷ್ಮೆ ಕೃಷಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ರೇಷ್ಮೆ ಇಲಾಖೆ.

4) ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ.

5) ಸರ್ಕಾರದ ಉಪ ಕಾರ್ಯದರ್ಶಿಗಳು, (ಆಡಳಿತ & ಸಮನ್ವಯ), ಆರ್ಥಿಕ ಇಲಾಖೆ.

6) ವ್ಯವಸ್ಥಾಪಕ ನಿರ್ದೇಶಕರು – ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ.

7) ಸರ್ಕಾರದಿಂದ ನಾಮನಿರ್ದೇಶಿತ – ನಿರ್ದೇಶಕರುಗಳು.

- **ಹಿಂದಿನ ವರ್ಷಗಳ ವಹಿವಾಟು:**

| Year | Purchase | | Sales | | Profit loss (-) | Cum. loss (-) | Net worth |
|---|---|---|---|---|---|---|---|
| | Qty. (In Tons) | Val. (Value in Cr.) | Qty. (In Tons) | Val. (Value in Cr.) | Val. (Value in Cr.) | Val. (Value in Cr.) | Val. (Value in Cr.) |
| **2008-09** | 127 | 15.69 | 147 | 18.98 | (-) 3.61 | (-) 21.81 | 9.64 |
| **2009-10** | 171 | 26.61 | 163 | 26.54 | (-) 2.59 | (-) 24.40 | 7.05 |
| **2010-11** | 201 | 41.79 | 161 | 34.44 | (-) 3.99 | (-) 28.40 | 3.06 |
| **2011-12** | 270 | 50.33 | 215 | 43.20 | (-) 3.69 | (-) 32.09 | (-) 0.63 |
| **2012-13** | 118 | 26.96 | 209 | 46.48 | (-)1.54 | (-)33.63 | (-) 2.17 |
| **2013-14** | 132 | 39.32 | 129 | 38.54 | (-)5.42 | (-)39.05 | (-) 7.59 |
| **2014-15** | 66 | 18.01 | 80 | 23.22 | (-)4.39 | (-)43.44 | (-)11.98 |
| **2015-16** | 45 | 9.68 | 47 | 11.47 | (-)4.16 | (-)47.60 | (-)16.15 |
| **2016-17** | 18 | 5.22 | 25 | 8.26 | (+) 0.06 | (-)47.57 | (-)16.12 |
| **2017-18** | 10 | 3.56 | 10 | 4.01 | (-)0.54 | (-)48.12 | (-)16.68 |
| **2018-19** | 20 | 5.60 | 12 | 3.82 | (-)1.33 | (-)49.45 | (-)18.00 |
| **2019-20** | 03 | 0.77 | 12 | 3.73 | (-) 1.39 | (-) 50.84 | (-)19.39 |
| **2020-21** | 69 | 16.03 | 62 | 16.50 | (+) 1.64 | (-) 49.24 | (-) 17.78 |
| **2021-22** | -- | -- | 6.06 | 2.36 | (-)0.16 | (-)49.39 | (-) 17.94 |
| **2022-23** | 0.03 | 0.01 | 0.02 | 0.01 | Not Audited | | |

**ಮಂಡಳಿಯ ಹಣಕಾಸಿನ ಪರಿಸ್ಥಿತಿ:**

- ಮಂಡಳಿಗೆ ಸರ್ಕಾರದಿಂದ ಪಾವತಿಯಾದ ಷೇರು ಬಂಡವಾಳ ರೂ.31.45 ಕೋಟಿ.
- ಕಳೆದ 4 ವರ್ಷಗಳಲ್ಲಿ ಮಂಡಳಿಯು ಹೆಚ್ಚಿನ ವಹಿವಾಟನ್ನು ನಡೆಸಲು ಸಾಧ್ಯವಾಗದೆ ಆಡಳಿತಾತ್ಮಕ ಖರ್ಚುವೆಚ್ಚಗಳಿಂದ ಹಾಗೂ ಸರ್ಕಾರವು ನೀಡಿರುವ ಸಾಲದ ಮೊತ್ತ ರೂ.10 ಕೋಟಿಗೆ ಶೇ 10.25 ಸರಳ ಬಡ್ಡಿ ಮತ್ತು ಶೇ 2.75 ಸುಸ್ತಿಬಡ್ಡಿಗಳನ್ನು ಪಾವತಿಸಲು ಬ್ಯಾಲೆನ್ಸ್ ಶೀಟ್‌ನಲ್ಲಿ ಮುನ್ನೇರ್ಪಾಡು (provision) ಮಾಡಿರುವುದರಿಂದ ನಷ್ಟ ಅನುಭವಿಸುತ್ತಿದೆ.

- 2010–2011 (ಫೆಬ್ರವರಿ – 2011) ರಲ್ಲಿ ರೇಷ್ಮೆ ಗೂಡಿನ ಬೆಲೆಗಳಲ್ಲಿ ಧಿಡೀರ್ ಕುಸಿತದಿಂದ ರೇಷ್ಮೆ ನೂಲಿನ ಬೆಲೆಗಳ / ವಹಿವಾಟಿನ ಮೇಲೆ ಆದ ಪರಿಣಾಮದ ಹಿನ್ನೆಲೆಯಲ್ಲಿ ಬೆಲೆಗಳನ್ನು ನಿಯಂತ್ರಿಸಲು ಸರ್ಕಾರದಿಂದ ರೂ.12 ಕೋಟಿಯನ್ನು ಸಾಲದ ರೂಪದಲ್ಲಿ ಮಂಡಳಿಗೆ ನೀಡಿದೆ ಹಾಗೂ ಹೆಚ್ಚಿನ ವಹಿವಾಟನ್ನು ನಡೆಸಲು ಬ್ಯಾಂಕಿನಿಂದ ಸಾಲ ಪಡೆಯುವಂತೆ ಸರ್ಕಾರದ ವತಿಯಿಂದ ಭದ್ರತೆ ನೀಡಿರುತ್ತದೆ.
- 2012–13 ನೇ ಸಾಲಿನ ಬಜೆಟ್‌ನಲ್ಲಿ ರೂ.2 ಕೋಟಿ ಸಹಾಯಧನವನ್ನು ಸರ್ಕಾರ ಘೋಷಿಸಿ ಬಿಡುಗಡೆ ಮಾಡಿದೆ.
- 2014–15 ರಲ್ಲಿ ರೇಷ್ಮೆ ಇಲಾಖೆಯಿಂದ ವ್ಯಾಪಾರ ವಹಿವಾಟಿಗಾಗಿ ರೂ.50 ಲಕ್ಷ ಧನ ಸಹಾಯ.
- ದಿನಾಂಕ 31–03–2019 ರ ಅಂತ್ಯಕ್ಕೆ ಮಂಡಳಿ ಒಟ್ಟು ರೂ.49.45 ಕೋಟಿ ನಷ್ಟ ಅನುಭವಿಸಿರುತ್ತದೆ.
- 2015–16 ರಲ್ಲಿ ರೇಷ್ಮೆ ನೂಲಿನ ವ್ಯಾಪಾರ ವಹಿವಾಟಿಗಾಗಿ ಸರ್ಕಾರದಿಂದ ರೂ.10 ಕೋಟಿ ಸಾಲ.
- 2020–21 ನೇ ಸಾಲಿನಲ್ಲಿ ರೇಷ್ಮೆ ಖರೀದಿ/ ಒತ್ತೆಗಾಗಿ ಸರ್ಕಾರದಿಂದ ರೂ.20 ಕೋಟಿ ಅನುದಾನ ಬಿಡುಗಡೆ ಮಾಡಿದ್ದು, ಕೋವಿಡ್–19 ಮಹಾಮಾರಿ ಉಲ್ಬಣಗೊಂಡ ಸಮಯದಲ್ಲಿ ಮಂಡಳಿಯು ಸದರಿ ಮೊತ್ತದಲ್ಲಿ 65 ಟನ್ ರೇಷ್ಮೆ ಒತ್ತೆ ಸಾಲ ಮೌಲ್ಯ ರೂ.9.67 ಕೋಟಿ ನೀಡಿದ್ದು ಹಾಗೂ 69 ಟನ್ ಮೌಲ್ಯ ರೂ.16.30 ಕೋಟಿಯ ರೇಷ್ಮೆ ನೂಲು ಖರೀದಿ ಮಾಡಿದ್ದು, ಇದರಿಂದ ಒಟ್ಟಾರೆ ರೂ.2.60 ಕೋಟಿ ಲಾಭವನ್ನು ಗಳಿಸಿರುತ್ತದೆ. ಸರ್ಕಾರದ ಆದೇಶ ಸಂಖ್ಯೆ: ರೇಷ್ಮೆ 67 ರೇಕೃವಿ 2020 ದಿನಾಂಕ: 31–03–2021 ರಂತೆ ಸರ್ಕಾರದಿಂದ ಲೆಕ್ಕ ಶೀರ್ಷಿಕೆ 2851–00–101–1–51(106) ರಡಿ ಬಿಡುಗಡೆ ಮಾಡಲಾದ ರೂ. 20.00 ಕೋಟಿಗಳ ಮೊತ್ತವನ್ನು ಲೆಕ್ಕ ಶೀರ್ಷಿಕೆ Receipt Head 0851-00-107-0-01-000 ಇಲ್ಲಿಗೆ ಭರಿಸಲಾಗಿರುತ್ತದೆ.
- **ಆಡಳಿತಾತ್ಮಕ ವೆಚ್ಚಗಳಿಗಾಗಿ ಸರ್ಕಾರದಿಂದ ಬಿಡುಗಡೆಯಾದ ಅನುದಾನದ ವಿವರ:**

| ಕ್ರ.ಸಂ | ವರ್ಷ | ಅನುದಾನದ ಮೊತ್ತ (ರೂ. ಕೋಟಿಗಳಲ್ಲಿ) |
|---|---|---|
| 1 | 2016–17 | 5.00 |
| 2 | 2017–18 | 5.00 |
| 3 | 2018–19 | 3.00 |
| 4 | 2019–20 | 2.27 |
| 5 | 2020–21 | 3.00 |
| 6 | 2021–22 | 3.00 |
| 7 | 2022–23 | 3.00 |